ಐಕ್ಯರಂಗ

ಪಾಕ್ಷಿಕ

ಭಾರತಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 | ಸಂಚಿಕೆ 41 | ಅಕ್ಟೋಬರ್ 7, 1984 | ಬೆಲೆ 60 ಪೈಸೆ.

ರಾಜ್ಯದ ಕ್ಷಾಮ ಪರಿಸ್ಥಿತಿಯನ್ನು ಎದುರಿಸಲು ಒಂದಾಗಿ

ನಮಗೆ ಬರಗಾಲವು ಹೊಸದೇನಲ್ಲ. ರಾಜ್ಯದ ಸುಮಾರು ಅರ್ಧ ಭಾಗದಲ್ಲಿ, ಅಂದರೆ ಬಹು ಭಾಗ ಮೈದಾನ ಪ್ರದೇಶದಲ್ಲಿ ಇದು ಮೇಲಿಂದ ಮೇಲೆ ಪೀಡಿಸುತ್ತಿರುವುದು ನಮ್ಮ ಅನುಭವವಾಗಿದೆ. ಆದರೆ ಈ ವರ್ಷದ ಬರಗಾಲವು ಹಲವು ಭಾಗಗಳಲ್ಲಿ ಎರಡು ವರ್ಷಗಳಿಂದ ಕ್ಷಾಮವನ್ನೆದುರಿಸಿಕೊಂಡು ಬಂದ ಜನರಿಗೆ ಈ ಮೂರನೇ ವರ್ಷ ಸಹಿಸಲಾರದ ಕಷ್ಟವನ್ನೊಡ್ಡಿದೆ. ಈ ವರ್ಷದ ವೈಶಿಷ್ಟವೇನೆಂದರೆ ಇದು ರಾಜ್ಯದ ಬಹುಭಾಗದಲ್ಲಿ ತಲೆದೋರಿದ್ದು ಉಗ್ರ ಸಮಸ್ಯೆಯಾಗಿ ಬಂದಿದೆ. ಈ ವರ್ಷ ಮಳೆ ಸರಿಯಾಗಿ ಬಾರದಿದ್ದುದರಿಂದ ಮುಂಗಾರು ಬೆಳೆ ಪೂರ್ತಿ ನಷ್ಟವಾಗಿದೆ.

ಈ ಪರಿಸ್ಥಿತಿಯನ್ನು ತಡವಾಗಿಯಾದರೂ ಸರ್ಕಾರ ಗಮನಿಸಿ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವುದು ಸ್ವಾಗತಾರ್ಹ. ಇದರ ಬಗ್ಗೆ ಸರಿಯಾದ ವಿವರಗಳನ್ನು ಸಂಗ್ರಹಿಸುವುದರಲ್ಲೂ ತಡವಾಗಿರುವುದು ಖಂಡನೀಯವಾಗಿದೆ. ಈ ಸರ್ಕಾರದ ಅಂದಾಜಿನಂತೆ ಸುಮಾರು 15,052 ಗ್ರಾಮಗಳು ಬರಗಾಲಕ್ಕೆ ಈಡಾಗಿವೆ. ಮೊದಲಿನ ಅಂದಾಜು 8,500 ಗ್ರಾಮಗಳೆಂದು ಹೇಳಲಾಗಿತ್ತು. ಇದರಿಂದ ಮೊದಲು 123 ಕೋಟಿ ರೂಪಾಯಿ ಸಹಾಯವನ್ನು ಕೇಂದ್ರ ಸರ್ಕಾರದಿಂದ ಕೇಳಿದ್ದಕ್ಕೆ ಈಗ ರೂ. 55 ಕೋಟಿ ಅಧಿಕ ಮೊತ್ತವನ್ನು ಸೇರಿಸಿ ಒಟ್ಟು ರೂ. 178 ಕೋಟಿ ಸಹಾಯ ಕೊಡಬೇಕೆಂದು ಕೇಂದ್ರ ಸರ್ಕಾರಕ್ಕೆ ರಾಜ್ಯವು ಕೇಳಿರುತ್ತದೆ. ಈ ಮೊತ್ತವು ಅನಗತ್ಯವಾದುದೆಂದು ಕಾಂಗ್ರೆಸ್ಸಿಗರು ಹೇಳುತ್ತಿದ್ದಾರೆ. ಆದರೆ ಅವರೇ ಅಧಿಕಾರದಲ್ಲಿದ್ದಾಗ 1980–81 ರಲ್ಲಿ ರಾಜ್ಯ ಸರ್ಕಾರವು ರೂ. 205 ಕೋಟಿ ಸಹಾಯ ಕೇಳಿತ್ತೆಂಬುದನ್ನು ಗಮನಿಸಬಹುದು.

ಆದರೆ ಕೇಂದ್ರ ಸರ್ಕಾರವು ಮೊಸಳೆ ಕಣ್ಣೀರು ಸುರಿಸುವುದಲ್ಲದೆ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಸಹಾಯ ಮಾಡುತ್ತಿದ್ದುದು ನಮ್ಮ ಅನುಭವವಾಗಿದೆ. ಹೋದ ವರ್ಷ ರೂ.28.2 ಕೋಟಿ ಸಹಾಯ ದೊರೆತಿತ್ತು. ಈಗೆಷ್ಟು ಸಹಾಯ ಸಿಗಬಹುದೆಂದು ನೋಡಬೇಕಾಗಿದೆ.

ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಏನೂ ಸಾಲದೆಂದು ನಮ್ಮ ಅಭಿಪ್ರಾಯ. ಕುಡಿಯುವ ನೀರು, ರೇಷನ್, ಉದ್ಯೋಗಗಳನ್ನೊದಗಿಸಲು ತೀವ್ರಕ್ರಮ ತೆಗೆದುಕೊಳ್ಳುವುದು ಅಗತ್ಯ. ದನಕರುಗಳಿಗೆ ಮೇವು ತ್ವರಿತವಾಗಿ ಒದಗಿಸಬೇಕು. ಇದನ್ನೊದಗಿಸುವುದರಲ್ಲಿ ಸರ್ಕಾರ ಹಿಂದೆ ಮುಂದೆ ನೋಡಬಾರದೆಂದು ನಾವು ಒತ್ತಾಯಿಸುತ್ತೇವೆ.

ಸರ್ಕಾರವೇ ಈ ಕ್ರಮುಗಳನ್ನು ಒದಗಿಸಲು ಸಾಧ್ಯವೆಂದು ಅವರು ತಿಳಿದಿದ್ದರೆ. ತಪ್ಪಾಗುವುದು. ಅಧಿಕಾರಿಗಳನ್ನೇ ಅವಲಂಬಿಸಿ ಕೊಂಡಿದ್ದರೆ. ನರಳುತ್ತಿರುವ ಜನತೆಗೆ ಪರಿಹಾರ ದೊರೆಯದು. ಇದಕ್ಕೆ ಜನತೆಯ ಸಹಕಾರ ಬೇಕು. ಸರ್ವ ಪಕ್ಷಗಳ ಮೇಲ್ಮಟ್ಟದ ಸಮಿತಿ ಇದ್ದು, ಅದರ ನೇತೃತ್ವದಲ್ಲಿ ಪರಿಹಾರ ಕಾರ್ಯಗಳು ನಡೆಯಬೇಕು. ಎಲ್ಲ ಮಟ್ಟಗಳಲ್ಲೂ ಎಲ್ಲ ವಿಭಾಗದ ಜನತೆಯನ್ನೊಳಗೊಂಡ ಸಮಿತಿಗಳ ಮೂಲಕ ಮುಖ್ಯವಾಗಿ ರೈತ ಸಂಘ ಮುಂತಾದ ಸಾಮೂಹಿಕ ಸಂಘಟನೆಗಳ ಪ್ರತಿನಿಧಿಗಳನ್ನೊಳಗೊಂಡು ಎಲ್ಲ ಪಕ್ಷಗಳ ಪ್ರತಿನಿಧಿಗಳ ಸಹಕಾರದಿಂದ ಪರಿಹಾರ ಕ್ರಮಗಳು ನಡೆದರೆ ಇದು ಸಫಲವಾಗುವುದು. ಜನತಾ ಸರ್ಕಾರವು ಕಾಂಗ್ರೆಸ್ ಹಾದಿಯಲ್ಲೇ ನಡೆಯಲಾರದೆಂದು ನಂಬುತ್ತೇವೆ.

ಇತ್ತೀಚೆಗೆ ಸ್ವಲ್ಪ ಮಳೆ ಬಿದ್ದಿದ್ದರೂ ಪರಿಹಾರ ಕಾರ್ಯಗಳು ಸಡಿಲಗೊಂಡರೆ ತಪ್ಪಾಗಬಹುದು. ಇದನ್ನು ಪಕ್ಷದ ದೃಷ್ಟಿಯಿಂದ ನೋಡುವುದು ಸರಿಯಾಗಲಾರದುಎಲ್ಲರ ಸಹಕಾರದಿಂದ ಇದು ನಡೆಯಲಿ.

ಈ ಸಂದರ್ಭದಲ್ಲಿ ಈ ಸಮಸ್ಯೆಗೆ ಶಾಶ್ವತ ಪರಿಹಾರ ಹುಡುಕುವುದು ಅಗತ್ಯ. ಅದನ್ನು ಗಂಭೀರವಾಗಿ ಸರಕಾರವು ತೆಗೆದುಗೊಂಡು ಯೋಜನೆಯಲ್ಲಿ ಅದನ್ನು ಅಳವಡಿಸಿ ಕೂಡಲೇ ಜಾರಿಗೆ ತರಲು ನಾವು ಒತ್ತಾಯಿಸುತ್ತೇವೆ.

ಎ. ಎಲ್. ಉಪಾಧ್ಯಾಯ

ಅ 18 ರಂದು ಬೀಡಿ ಮಜೂರರ ಸತ್ಯಾಗ್ರಹ

ಪ್ರಾವಿಡೆಂಟ್ ಫಂಡಿನ ರಾಜ್ಯ ಕಮಿಶನರರು, ಜಿಲ್ಲಾಧಿಕಾರಿಗಳು, ಬೀಡಿ ಮಾಲೀಕರು ಮತ್ತು ಕಾರ್ಮಿಕ ಪ್ರತಿನಿಧಿಗಳು 1982 ಜೂನ್ 21 ರಂದು ನಡೆಸಿದ ಒಪ್ಪಂದವನ್ನು ಸರ್ಕಾರ ಮತ್ತು ಮಾಲೀಕರು ಉಲ್ಲಂಘಿಸಿ ಕಳೆದ 8 ವರ್ಷಗಳಿಂದ ಪ್ರಾವಿಡೆಂಟ್ ಫಂಡಿಗೆ ಕಡಿತ ಮಾಡುವ, ಹಣದ ರಶೀದಿಯನ್ನು ಮಜೂರರಿಗೆ ಈವರೆಗೆ ನೀಡದಿರುವುದನ್ನು ಪ್ರತಿಭಟಿಸಿ ಮತ್ತು ಬೀಡಿ ಕಾರ್ಮಿಕರಿಗೆ ಬೋನಸ್ಸು ಹೆಚ್ಚಳ, ಕಲ್ಯಾಣ ನಿಧಿಯಿಂದ ಆಸ್ಪತ್ರೆ, ಬೀಡಿ ಕಾರ್ಮಿಕರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಸ್ಕಾಲರ್‌ಶಿಪ್, ಮನೆ ಕಟ್ಟಲು ಸಹಾಯ ಇತ್ಯಾದಿ ಸವಲತ್ತುಗಳನ್ನು ನೀಡಲು ಒತ್ತಾಯಿಸಿ ತಾ. 18-10-1984 ರಂದು ಮಂಗಳೂರಿನ ಜಿಲ್ಲಾಧಿಕಾರಿ ಕಛೇರಿ ಎದುರು ಸಾಮೂಹಿಕ ಸತ್ಯಾಗ್ರಹ ನಡೆಸಲು 27-9-84 ರಂದು ಸೇರಿದ ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಷನ್ (ಸಿ. ಐ. ಟಿ. ಯು.) ತೀರ್ಮಾನಿಸಿದೆ. ಎಲ್ಲ ಬೀಡಿ ಕಾರ್ಮಿಕರು ಈ ಚಳುವಳಿಯಲ್ಲಿ ಸೇರಬೇಕೆಂದು ಫೆಡರೇಷನ್ ಕರೆ ನೀಡಿದೆ.

ಕಾಂಗ್ರೆಯನ್ನು ಸೋಲಿಸಲು ಪಿ. ರಾಮಚಂದ್ರರಾವ್ ಕರೆ

ತಾರೀಕು 22-9-1984 ರಂದು ರಾಜಕೀಯ ಪ್ರಚಾರದ ಅಂಗವಾಗಿ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕುಂದಾಪುರ ತಾಲೂಕು ಸಮಿತಿಯ ಆಶ್ರಯದಲ್ಲಿ ಕಾರ್ಮಿಕರ ಮತ್ತು ರೈತ-ಕೃಷಿ ಕೂಲಿಗಾರರ ಬೃಹತ್ ಮೆರವಣಿಗೆ ಹಾಗೂ ಸಂಜೆ ಗಂಟೆ 5ಕ್ಕೆ ಸರಿಯಾಗಿ ಕುಂದಾಪುರ ಶಾಸ್ತ್ರಿ ಪಾರ್ಕಿನ ಬಳಿ ಸಾರ್ವಜನಿಕ ಸಭೆ ನಡೆಯಿತು. ತಾಲೂಕಿನ ಹೆಚ್ಚಿನ ಪ್ರದೇಶಗಳಿಂದ ಮೆರವಣಿಗೆಯನ್ನು ಸಂಘಟಿಸಲಾಗಿತ್ತು.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ, ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ ಹಾಗೂ ವಿಧಾನಸಭಾ ಸದಸ್ಯರಾದ ಕಾ|| ಪಿ. ರಾಮಚಂದ್ರ ರಾವ್ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಪ್ರಜಾಪ್ರಭುತ್ವದ ರಕ್ಷಣೆಗಾಗಿ ಮುಂಬರುವ ಚುನಾವಣೆಯಲ್ಲಿ ಸರ್ವಾಧಿಕಾರಿ ಶಕ್ತಿ ಇಂದಿರಾ ಕಾಂಗ್ರೆಸ್ಸನ್ನು ಸಂಪೂರ್ಣ ಸೋಲಿಸಲು ಜನಸಾಮಾನ್ಯರು ಶ್ರಮಿಸಬೇಕೆಂದು ಕರೆ ನೀಡಿದರು.

ಸರ್ವಾಧಿಕಾರಿ, ಕೋಮುವಾದಿ ಮತ್ತು ವಿಛಿದ್ರಕಾರಿ ಶಕ್ತಿಗಳ ಪಿತೂರಿಗಳನ್ನು ಸೋಲಿಸುವುದು ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳ ಕರ್ತವ್ಯವಾಗಿದೆ ಹಾಗೂ ಜನಸಾಮಾನ್ಯರು ಜಾಗ್ರತರಾಗಿರುವುದು ತೀರಾ ಅವಶ್ಯವಿದೆ ಎಂದು ಹೇಳಿದರು.

ಸಿ. ಪಿ. ಐ. (ಎಂ) ನ ಜಿಲ್ಲಾ ಕಾರ್ಯದರ್ಶಿಯುವರಾದ ಕಾ|| ಕೆ. ಆರ್. ಶ್ರೀಯಾನ್‌ರವರು ಮಾತನಾಡಿ ದೇಶದ ಆರ್ಥಿಕ ಪರಿಸ್ಥಿತಿಯು ಹದಗೆಡುತ್ತಿದ್ದು, ಕೇಂದ್ರ ಸರಕಾರವು ತನ್ನ ಬಂಡವಾಳಶಾಹಿ ವ್ಯವಸ್ಥೆಯನ್ನು ಉಳಿಸಿಕೊಳ್ಳುವ ಹತಾಶ ಪ್ರಯತ್ನಗಳ ಅಂಗವಾಗಿ ಕಾರ್ಮಿಕರ, ರೈತರ ಮತ್ತು ಜನಸಾಮಾನ್ಯರ ಜೀವನ ಮತ್ತು ಹಕ್ಕುಗಳ ಮೇಲೆ ನಿರಂತರವಾಗಿ ದಾಳಿಗಳನ್ನು ನಡೆಸುತ್ತಿದೆ. ಇದರ ವಿರುದ್ಧ ಸಂಘಟಿತ ಹೋರಾಟ ನಡೆಸಲು ಸಿದ್ಧರಾಗಬೇಕೆಂದರು.

ಆರಂಭದಲ್ಲಿ ಕಾ|| ಕೆ. ಶಂಕರ್‌ರವರು ಸ್ವಾಗತ ಭಾಷಣ ಮಾಡಿದರು. ಸಭೆಯ ಅಧ್ಯಕ್ಷತೆಯನ್ನು ಕುಂದಾಪುರ ತಾಲೂಕು ಸಮಿತಿಯ ಕಾರ್ಯದರ್ಶಿಯವರಾದ ಕಾ|| ಅಬ್ರಹಾಂ ಕರ್ಕಡರವರು ವಹಿಸಿದ್ದು, ಕೊನೆಗೆ ಕಾ|| ಸಿ. ನಾರಾಯಣರವರು ಎಲ್ಲರಿಗೂ ಅಭಿನಂದನೆ ಸಲ್ಲಿಸಿದರು.

●

ಏರಿಳಿತ ತುಟ್ಟಿಭತ್ತೆಗಾಗಿ ಹೋರಾಟ ನಡೆಸಲು ಮಜೂರರ ನಿರ್ಧಾರ

ಕಾರ್ಮಿಕ ಮಂತ್ರಿಯವರು ಹಂಚಿನ ಕೈಗಾರಿಕೆಯ ಅಧ್ಯಯನ ನಡೆಸಿ ವರದಿ ಮಾಡಲು ಒಂದು ತ್ರಿಪಕ್ಷೀಯ ಸಮಿತಿಯನ್ನು ರಚಿಸಿ ಅದರ ವರದಿ ಮೇಲೆ ಏರಿಳಿತ ತುಟ್ಟಿಭತ್ತೆ ಸಹಿತ ಕನಿಷ್ಠ ವೇತನ ಪ್ರಕಟಿಸುವ ಭರವಸೆಯನ್ನು ಈ ಕೂಡಲೇ ಈಡೇರಿಸದಿದ್ದರೆ ಹೋರಾಟಕ್ಕೆ ಇಳಿಯಬೇಕೆಂಬ ನಿರ್ಧಾರವನ್ನು ತಾ|| 30-9-84 ರಂದು ಸೇರಿದ ಸೌತ್ ಕೆನರಾ ಟೈಲ್ ವರ್ಕರ್ಸ್ ಯೂನಿಯನಿನ ಮಹಾಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಯೂನಿಯನಿನ ಅಧ್ಯಕ್ಷರಾದ ಕಾ|| ಕೆ. ಆರ್. ಶ್ರೀಯಾನರು ವಹಿಸಿದ್ದರು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಿ.ಐ.ಟಿ.ಯು. ಮುಖಂಡರೂ, ಶಾಸಕರೂ ಆದ ಕಾ|| ಪಿ. ರಾಮಚಂದ್ರರಾಯರು ಇಂದಿನ ದೇಶದ ಪರಿಸ್ಥಿತಿಯನ್ನು ವಿವರಿಸಿ, ಕಾರ್ಮಿಕ ವರ್ಗದ ಪಾತ್ರವೇನೆಂಬುದನ್ನು ತಿಳಿಸಿದರು. ಛಿದ್ರಕಾರಿ, ಕೋಮುವಾದಿ ಮುಂತಾದ ಶಕ್ತಿಗಳು ದೇಶದಲ್ಲಿ ಅಶಾಂತಿಯನ್ನು ಉಂಟುಮಾಡುವುದು ಮಾತ್ರವಲ್ಲ. ಕಾರ್ಮಿಕರ ಹಾಗೂ ಪುರೋಗಾಮಿ ಸಂಘಟನೆಯಲ್ಲಿ ಬಿಕ್ಕಟ್ಟನ್ನು ತರುತ್ತದೆ. ಇದರ ಬಗ್ಗೆ ಕಾರ್ಮಿಕ ವರ್ಗ ಎಚ್ಚರಿಕೆಯಿಂದಿರಬೇಕೆಂದರು. ಪಂಜಾಬಿನ, ಅಸ್ಸಾಂ, ಬೊಂಬಾಯಿ ಮುಂತಾದ ಕಡೆಗಳ ಪರಿಸ್ಥಿತಿಯನ್ನು ವಿವರಿಸಿದರು. ಇದು ಛಿದ್ರಕಾರೀ ಶಕ್ತಿಗಳ ಆಟ— ಇದರ ವಿರುದ್ಧ ಹೋರಾಟ ನಡೆಸಲು ಕಾರ್ಮಿಕ ವರ್ಗ ಸಿದ್ಧರಾಗಬೇಕೆಂದರು. ಪ್ರಾರಂಭದಲ್ಲಿ ಯೂನಿಯನಿನ ಪ್ರಧಾನ ಕಾರ್ಯದರ್ಶಿಯವರು ಸ್ವಾಗತಿಸಿದರು. ಗತ ವರ್ಷದ ವರದಿ ಹಾಗೂ ಲೆಕ್ಕಪತ್ರವನ್ನು ಸಭೆಯ ಮುಂದಿಟ್ಟರು. ಸರ್ವಾನುಮತದಿಂದ ಅಂಗೀಕರಿಸಿದ ಬಳಿಕ ಮುಂದಿನ ವರ್ಷಕ್ಕೆ ಕಾ|| ಕೆ.ಆರ್. ಶ್ರೀಯಾನರು ಅಧ್ಯಕ್ಷರಾಗಿಯೂ, ಕಾ||ಬಿ. ಮಾಧವ, ಸಿ. ನಾರಾಯಣ ಮತ್ತು ಡಿ. ಗೋಪಾಲ, ಉಪಾಧ್ಯಕ್ಷರಾಗಿಯೂ ಕೆ. ಮೂಸಬ್ಬ ಪ್ರಧಾನ ಕಾರ್ಯದರ್ಶಿಯಾಗಿಯೂ ಕಾ|| ಕೆ. ಶಂಕರ ಮತ್ತು ಶಿವಾನಂದ ಕೋಡಿ, ಜೊತೆ ಕಾರ್ಯದರ್ಶಿಯಾಗಿಯೂ, ಕಾ|| ಅಬ್ರಹಾಂ ಕರ್ಕಡ, ಕೋಶಾಧಿಕಾರಿಯಾಗಿಯೂ ಇರುವ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು. ಸಭೆಯನ್ನು ಉದ್ದೇಶಿಸಿ ಕಾ|| ಬಿ. ಮಾಧವ ಮತ್ತು ಕೆ. ಶಂಕರ ಮಾತನಾಡಿದರು.

ಸಭೆಗೆ ಮೊದಲು ದಿವಂಗತ ಕಾ|| ಕೊರಗಪ್ಪ ರೈಯವರ ಭಾವಚಿತ್ರವನ್ನು ಶಾಸಕರಾದ ಶ್ರೀ ಪಿ ರಾಮಚಂದ್ರ ರಾಯರು ಸಂಘದ ಕಛೇರಿಯಲ್ಲಿ ಅನಾವರಣ ಮಾಡಿದರು.

●

ನಾಗಪುರವನ್ನು ನಡುಗಿಸಿದ ಎನ್. ಎಸ್. ಯು. ಐ. ಸಮಾವೇಶ

ಮಹಾರಾಷ್ಟ್ರದ ನಾಗಪುರದಲ್ಲಿ ಸೆಪ್ಟೆಂಬರ್ 11 ರಿಂದ 13 ರವರೆಗೆ ನಡೆದ ನ್ಯಾಷನಲ್ ಸ್ಟೂಡೆಂಟ್ಸ್ ಯೂನಿಯನ್ ಆಫ್ ಇಂಡಿಯಾ (ಎನ್.ಎಸ್.ಯು.ಐ.) ನ ಪ್ರಪ್ರಥಮ ಸಮಾವೇಶವು ದೇಶದ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲೂ ಮುಖಪುಟದ ಸುದ್ದಿಯಾಯಿತು. ಶ್ರೀಮತಿ ಇಂದಿರಾಗಾಂಧಿ ಮತ್ತು ಶ್ರೀ ರಾಜೀವ ಗಾಂಧಿಯವರು ಭಾಗವಹಿಸಿದ್ದ ಈ ಅದ್ದೂರಿ ವಿದ್ಯಾರ್ಥಿ ಮೇಳಕ್ಕೆ ವಿಶೇಷ ಪ್ರಚಾರ ಸಿಗುವುದು ನಿರೀಕ್ಷಿತವಾದರೂ ಇದು ತನ್ನ ಮಾತೃ ಸಂಸ್ಥೆಯಾದ ಕಾಂಗ್ರೆಸ್ (ಐ) ಪಕ್ಷಕ್ಕೆ ಪ್ರಖ್ಯಾತಿ ತರುವುದರ ಬದಲು ತುಂಬಲಾರದ ಅಪಖ್ಯಾತಿಯನ್ನೇ ತಂದೊಡ್ಡಿದೆ. ಕಾಂಗ್ರೆಸ್ (ಐ) ಪಕ್ಷ ಮತ್ತದರ ಸಂಘಟನೆಗಳಲ್ಲಿನ ನೈತಿಕ ಅಧಃ ಪತನದ ಪರಮಾವಧಿಯ ಪ್ರತೀಕ ಈ ಪ್ರಕರಣ. ದಿವಂಗತ ಜವಹರಲಾಲ್ ನೆಹರೂರವರಿಂದ ಉದ್ಘಾಟನೆಯಾದ ಸಂಘಟಿತ ವಿದ್ಯಾರ್ಥಿ ಚಳವಳಿ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ವಹಿಸಿದ ಅವಿಸ್ಮರಣೀಯ ತ್ಯಾಗ, ಬಲಿದಾನ, ರಾಷ್ಟ್ರ ಪ್ರೇಮಗಳ ಪರಂಪರೆಗೆ ವ್ಯತಿರಿಕ್ತವಾಗಿ ಇಡೀ ರಾಷ್ಟ್ರದ ವಿದ್ಯಾರ್ಥಿ ಸಮುದಾಯಕ್ಕೇ ಕಳಂಕವನ್ನು ತಂದೊಡ್ಡಿದೆ ಈ ಇಂದಿರಾ ವಿದ್ಯಾರ್ಥಿ ಮೇಳ.

ರಾಷ್ಟ್ರ ಸಮ್ಮೇಳನದಲ್ಲಿ ಭಾಗವಹಿಸಲು ದೇಶದ ಎಲ್ಲೆಡೆಗಳಿಂದಲೂ ಧಾವಿಸಿ ಬಂದ ಎನ್.ಎಸ್.ಯು.ಐ. (ಐ) ಕಾರ್ಯಕರ್ತರ ಈ ದಂಡು ತನ್ನ ಪುಂಡಾಟಿಕೆಗಳಿಂದ ನಾಗಪುರ ನಗರವನ್ನೇ ನಡುಗಿಸಿತು. ನಿಗಧಿತ 30 ಸಾವಿರ ಪ್ರತಿನಿಧಿಗಳ ಸಂಖ್ಯೆಯನ್ನು ಮೀರಿ 60 ಸಹಸ್ರ ಮಂದಿ ನಾಗಪುರದಲ್ಲಿ ವಿಷಸರ್ಪಗಳ ಮಹಾಪೂರವಾಗಿ ಹರಿದರು. ವಿದ್ಯಾರ್ಥಿ ನಾಯಕರೆಂದು ಕರೆಸಿಕೊಂಡ ಈ ಸಮಾಜಘಾತುಕ ವ್ಯಕ್ತಿಗಳು ನಡೆಸಿದ ಅತಿರೇಕಗಳು ನಾಗಪುರವನ್ನೇ ನಡುಗಿಸಿದವು. ದೇಶದ ವಿದ್ಯಾರ್ಥಿ ಚಳುವಳಿಯ ಇತಿಹಾಸದಲ್ಲೇ ಕಪ್ಪು ದಾಖಲೆಯೊಂದನ್ನು ಸೃಷ್ಟಿಸಿದ ಈ ಅರಾಜಕತಾವಾದಿಗಳ ಹೇಯ ಕೃತ್ಯಗಳು ಎಲ್ಲ ನಾಗರಿಕ ಜನತೆಯಲ್ಲೂ ತೀವ್ರ ಕಳವಳವನ್ನುಂಟು ಮಾಡಿದೆ.

ದಿನಪತ್ರಿಕೆಗಳ ವರದಿಯ ಪ್ರಕಾರ ಎನ್.ಎಸ್.ಯು.ಐ. ಪ್ರತಿನಿಧಿಗಳು ನಾಗಪುರದ ರಸ್ತೆಗಳಲ್ಲಿನ ಅಂಗಡಿ, ಹೋಟೆಲ್‌ಗಳನ್ನು ಲೂಟಿ ಮಾಡಿದರು. ಮದುವೆ ಮನೆಗಳಿಗೆ ನುಗ್ಗಿದರು. ಬೀದಿಯಲ್ಲಿ ಓಡಾಡುವ ಮಹಿಳೆಯರ ಸೀರೆಗಳನ್ನು ಎಳೆದರು. ಜಿ. ಎಸ್. ಕಾಮರ್ಸ್ ಕಾಲೇಜಿನೊಳಗೆ ನುಗ್ಗಿ ಹುಡುಗಿಯರಿಗೆ ಮುತ್ತಿಟ್ಟು ಸ್ಕರ್ಟ್‌ಗಳನ್ನು ಕಳಚಿದರು. ಕೆಂಪು ದೀಪದ ರಸ್ತೆಯ ಸೂಳೆಗೇರಿಗೆ ತಂಡೋಪತಂಡವಾಗಿ ನುಗ್ಗಿದ ಎನ್.ಎಸ್.ಯು.ಐ. ಪ್ರತಿನಿಧಿಗಳು ವೇಶ್ಯೆಯರ ಮೇಲೆ ಲೈಂಗಿಕ ಅತಿರೇಕಗಳನ್ನು ನಡೆಸಿದರು. ಈ ಉದ್ರಿಕ್ತ ಮೃಗ ಮಾನವರ ಕ್ರೌರ್ಯವನ್ನು ಪ್ರತಿಭಟಿಸಿ ರೆಡ್ ಲೈಟ್ ಸ್ಟ್ರೀಟ್ ಬಂದ್ ಆಚರಿಸಲಾಯಿತು. ಸಮಾವೇಶದ ಶಿಬಿರನೊಳಗೂ ಪ್ರತಿನಿಧಿಗಳ ಅವಾಂತರ ಹೇಳತೀರದು. ಅಶಿಸ್ತಿನ ಪ್ರತೀಕದಂತಿದ್ದ ಕಾರ್ಯಕರ್ತರು ಅಸಮರ್ಪಕವಾಗಿದ್ದ ಭೋಜನ ಶಾಲೆಯನ್ನು ಅಸ್ತವ್ಯಸ್ತಗೊಳಿಸಿದರು. ರಾಜೀವಗಾಂಧಿಯವರ ಗಂಭೀರ ಭಾಷಣ ನಡೆಯುತ್ತಿರುವಾಗಲೇ ಸಭಾಂಗಣದ ಕುರ್ಚಿಗಳು ಮುರಿದು ಬೀಳತೊಡಗಿದವು. ಕೆಲವರು ಮಂಗಗಳಂತೆ ಚಾವಣಿಗೆ ನೇತು ಬಿದ್ದರು. ಮಹಡಿಗಳ ಮೇಲೆ ನೂರರಷ್ಟು ಪ್ರತಿನಿಧಿಗಳು ಹಾಡ ಹಗಲಿನಲ್ಲೇ ಬೆತ್ತಲೆ ನೃತ್ಯ ಮಾಡಿದರು. ನಗರದ ಮೂಲೆ ಮೂಲೆಗಳಲ್ಲೂ ಎನ್.ಎಸ್.ಯು.ಐ. ದಂಡುಗಳು ಲಗ್ಗೆ ಹಾಕಿದವು. ಈ ದುಷ್ಕೃತ್ಯಗಳಿಂದ ಕೆರಳಿದ ನಾಗಪುರದ ನಾಗರೀಕರು ಈ ಪುಂಡರನ್ನು ಬೇಟೆಯಾಡಿದರು. ಪೋಲೀಸರಿಗೆ ದೂರು ನೀಡಿದರೂ ರಹಸ್ಯ ಆಜ್ಞೆಯನ್ನು ಪಾಲಿಸಿದ ಅವರು ಈ ಕಾನೂನು ಮುರುಕರ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಬದಲಾಗಿ ತಮ್ಮ ಬೆಂಗಾವಲಿನೊಂದಿಗೆ ಇಂದಿರಾ ಬೆಂಬಲಿಗರನ್ನು ಬೀಳ್ಕೊಟ್ಟರು. ರೈಲುಗಳಲ್ಲೂ ಸಹ ಎನ್. ಎಸ್. ಯು. ಐ. ಕಾರ್ಯಕರ್ತರು ಮಧ್ಯಪ್ರದೇಶದ ಇಬ್ಬರು ಕಾಂಗ್ರೆಸ್ (ಐ) ಮಂತ್ರಿಗಳೂ ಸೇರಿದಂತೆ ತಮ್ಮ ಸಹ ಪ್ರಯಾಣಿಕರೊಂದಿಗೆ ಅಸಭ್ಯ ರೀತಿಯಲ್ಲಿ ವರ್ತಿಸಿದರು. ಕ್ರೋಧಗೊಂಡ ಪ್ರಯಾಣಿಕರು ಪ್ರತಿನಿಧಿಯೊಬ್ಬನನ್ನು ಟ್ರೈನಿನಿಂದ ಹೊರಗೆ ತಳ್ಳಿದ ಪರಿಣಾಮ ಆಸ್ಪತ್ರೆಯಲ್ಲಿ ಅಸುನೀಗಿದ. ದೇಶದ ಸ್ವಾತಂತ್ರ್ಯ ಸಂಗ್ರಾಮದ ಮುಂದಾಳುತ್ವ ವಹಿಸಿದ ಕಾಂಗ್ರೆಸ್ ಪಕ್ಷದ ಆದರ್ಶಗಳಿಗೆ ತಿಲಾಂಜಲಿ ನೀಡಿದ ಇಂದಿರಾ ವಿದ್ಯಾರ್ಥಿ ಬೆಂಬಲಿಗರು ಕಾಂಗ್ರೆಸ್ (ಐ) ಪಕ್ಷದ ಅವಸಾನಕ್ಕೆ ನಾಂದಿ ಹಾಡಿದರು.

ಈ ಘಟನಾವಳಿಗಳ ಬಗ್ಗೆ ಕಾಂಗ್ರೆಸ್ (ಐ) ಪಕ್ಷ ತನಿಖೆ ನಡೆಸುವುದಾಗಿ ಬಹಿರಂಗವಾಗಿ ಘೋಷಿಸಿದೆ. ಶ್ರೀಮತಿ ಗಾಂಧಿಯವರು ಮತ್ತು ಅವರ ಸುಪುತ್ರ ಶ್ರೀ ರಾಜೀವಗಾಂಧಿಯವರು ಈ ಅವಮಾನಕಾರಿ ಪ್ರಕರಣಕ್ಕೆ ವಿರೋಧ ಪಕ್ಷಗಳನ್ನ ದೂರುತ್ತಿದ್ದು ತಮ್ಮ ಮತ್ತು ತಮ್ಮ ಪಕ್ಷದ ಘನತೆಗೆ ಕುಂದು ತರುವ ಪಿತೂರಿ ಎಂದು ಆಪಾದಿಸಿದ್ದಾರೆ. ಆದರೆ ಗಗನ ಸಖಿಯೊಂದಿಗೆ ಕಂಠಪೂರ್ತಿ ಕುಡಿದು ಅಸಭ್ಯವಾಗಿ ವರ್ತಿಸಿದ ಮಹಾರಾಷ್ಟ್ರದ ಉಪ ಮುಖ್ಯಮಂತ್ರಿಯಾಗಿದ್ದ ಶ್ರೀ ರಾಮರಾವ್ ಆಧಿಕ್, ಸೊಸೆಯ ಮೇಲೆಯೇ ದಬ್ಬಾಳಿಕೆ ನಡೆಸಿದ ಭೋಸ್ಲೆ, ಸಿಮೆಂಟ್ ಹಗರಣದ ಅಂತುಲೆ ಮುಂತಾದ ನಾಯಕರುಗಳ ಪೀಳಿಗೆಯ ಕಾಂಗ್ರೆ ಸಂಸ್ಕೃತಿಯನ್ನು ಚೆನ್ನಾಗಿ ಬಲ್ಲ ದೇಶದ ಜನತೆ ಸತ್ಯ ಶೋಧನೆ ಮಾಡಿ ಎಲ್ಲರು ಮುಂಬರುವ ಲೋಕಸಭಾ ಚುನಾವಣೆಗಳಲ್ಲಿ ಸರಿಯಾದ ಉತ್ತರ ನೀಡ ಬಲ್ಲರು.

– ಎಸ್. ಆರ್. ಆರಾಧ್ಯ

ರೈತ ಸಂಘದ ಚಟುವಟಿಕೆಗಳು

ಕರ್ನಾಟಕ ರಾಜ್ಯದ ಪ್ರತಿಯೊಂದು ಹಳ್ಳಿಯಲ್ಲಿಯೂ ರೈತ ಸಂಘದ ಗ್ರಾಮ ಸಮಿತಿಗಳನ್ನು ರಚಿಸಿ ರೈತರ ಸಮಸ್ಯೆಗಳನ್ನು ಅಭ್ಯಾಸ ಮಾಡಿ ಆ ಸಮಿತಿಗಳ ನೇತೃತ್ವದಲ್ಲಿ ಸಮಸ್ಯೆಗಳ ಪರಿಹಾರಕ್ಕಾಗಿ ಚಳುವಳಿ ಹೂಡಬೇಕೆಂದು ಪ್ರಾಂತ ರೈತ ಸಂಘ ನಿರ್ಣಯ ಕೈಗೊಂಡಿದ್ದು, ಅದರಂತೆ ದ. ಕ. ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ವಿಶೇಷವಾಗಿ ಕಾರ್ಯಕ್ರಮ ನಡೆಯುತ್ತಿದೆ. ಆ ನಿರ್ಣಯದಂತೆ ದ. ಕ. ಜಿಲ್ಲೆಯ ಸುಳ್ಯ ತಾಲೂಕಿನಲ್ಲಿ ಗ್ರಾಮ ಸಮಿತಿಗಳ ರಚನೆಯ ಕೆಲಸ ಮುಂದುವರಿದಿದೆ. ಇತರ ಜಿಲ್ಲೆಗಳಲ್ಲಿಯೂ ಈ ಕಾರ್ಯಕ್ರಮ ಮುಂದುವರಿಯುವುದು ಅತ್ಯಗತ್ಯ.

ಸುಳ್ಯ

ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ತಾಪಿನ ಮೂಲೆಯಲ್ಲಿ 40ಕ್ಕ ಮೀರಿ ಸರಕಾರಿ ಮೈನರ್ ಕಾಡು ಮತ್ತು ಗೇರು ಬೀಜಾ ತೋಟಗಳಲ್ಲಿಯ ಕುಳಿತ ಆಗು ಮೆದಾರರ ಹಾಗೆಯೇ ಪೆರುವಾಜೆ ಮತ್ತು ಗುತ್ತೀಗಾರು ಗ್ರಾಮದ ರೈತರ ಸಭೆ ಕರೆದು ರೈತ ಸಂಘಟನೆ ಮಾಡಲಾಗಿದೆ. ಪೆರುವಾಜೆ ಗ್ರಾಮದ ರೈತ ಸಂಘಕ್ಕೆ ಗೋಪಾಲ ಕೃಷ್ಣ ಆಚಾರಿಯವರು ಅಧ್ಯಕ್ಷರಾಗಿ, ಕರಿಯಪ್ಪ ಪೂಜಾರಿಯವರು ಕಾರ್ಯದರ್ಶಿಯಾಗಿರುವ 7 ಮಂದಿಯ ಕಮಿಟಿ ರಚಿಸಲಾಗಿದೆ. ಗುತ್ತೀಗಾರು ಗ್ರಾಮದಲ್ಲಿ ಶಿವಾನಂದ ಮೂವ ಕಾರ್ಯದರ್ಶಿಯಾಗಿರುವ 11 ಜನರ ಗ್ರಾಮ ಸಮಿತಿ ರಚಿಸಲಾಗಿದೆ. ಸುಳ್ಯ ತಾಲೂಕ ರೈತ ಸಂಘದ ಪ್ರಧಾನ ಕಾರ್ಯದರ್ಶಿ ವೋನಪ್ಪ ಗೌಡರು ಈ ಸಂಘಟನೆಯ ನೇತೃತ್ವವಹಿಸಿದ್ದಾರೆ.

ಕುಂದಾಪುರ

ದ.ಕ. ಜಿಲ್ಲಾ ಕುಂದಾಪುರ ತಾಲೂಕ ರೈತ ಸಂಘದ ವಿಸ್ತೃತ ಸಭೆಯು ದಿನಾಂಕ 25-9-84 ರಂದು ರೈತ ಸಂಘದ ಅಧ್ಯಕ್ಷರಾದ ಕಾಂ|| ಯು. ದಾಸ್ ಭಂಡಾರಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರಂಭದಲ್ಲಿ ರೈತ ಸಂಘದ ಜೊತೆ ಕಾರ್ಯದರ್ಶಿ ಕಾಂ|| ವೆಂಕಟೇಶ ನಾಯಕ್‌ರವರು ಸ್ವಾಗತ ಭಾಷಣ ಮಾಡಿದರು ಕಾರ್ಯದರ್ಶಿ ಕಾ|| ಅಬ್ರಹಾಂ ಕರ್ಕಡರವರು ಹಿಂದಿನ ಚಟುವಟಿಕೆಯ ವರದಿಯನ್ನು ಸಭೆಯಲ್ಲಿ ಹೇಳಿದರು. ಐದು ಮಂದಿ ಪ್ರತಿ ನಿಧಿಗಳು ವರದಿಯ ಕುರಿತು ವಿಮರ್ಶೆ ನಡೆಸಿ ತಮ್ಮ ಅಭಿಪ್ರಾಯವನ್ನು ಸಭೆಗೆ ಹೇಳಿದರು. ಸಭೆಯನ್ನುದ್ದೇಶಿಸಿ ಕಾಂ|| ಸಿ. ಗಾರಾಯಣ ಮತ್ತು ಕಾಂ|| ಕೆ. ಶಂಕರ್‌ರವರು ಮಾತನಾಡಿದರು, ಗ್ರಾಮಾಂತರ ಪ್ರದೇಶದಲ್ಲಿ ಹಳ್ಳಿಯ ಬಡವರ, ಕೃಷಿಕಾರ್ಮಿಕರ ಒಗ್ಗಟ್ಟನ್ನು ಬಲ ಪಡಿಸಿ ರೈತರ ಸಖ್ಯತೆಯೊಂದಿಗೆ ಪ್ರಬಲವಾದ ಸಂಘಟನೆ ಮಾಡಬೇಕೆಂದು ಕರೆ ಇತ್ತರು.

ಮಹಿಳೆಯರೂ ಸೇರಿದ 32 ಸದಸ್ಯರುಳ್ಳ ಕಾರ್ಯಕಾರೀ ಸಮಿತಿಯೊಂದನ್ನು ರಚಿಸಲಾಯಿತು. ಯು. ದಾಸ್ ಭಂಡಾರಿ ಕೊಟೇಶ್ವರ (ಅಧ್ಯಕ್ಷ) ಗೋವಿಂದ ಸೆಟ್ಟೆಗಾರ್ ಕೊಟೇಶ್ವರ (ಉಪಾಧ್ಯಕ್ಷ)ಶಿವರಾಮಸೆಟ್ಟೆಉಳ್ತೂರು (ಉಪಾಧ್ಯಕ್ಷ) ಕೆ.ರಾಮಶೆಟ್ಟಿ ಗುಲ್ವಾಡಿ (ಉಪಾಧ್ಯಕ್ಷ) ಅಬ್ರಹಾಂ ಕರ್ಕಡ ಬಸ್ರೂರು (ಕಾರ್ಯದರ್ಶಿ) ವೆಂಕಟೇಶ ನಾಯಕ್ ಕೋಣಿ (ಜೊತೆ ಕಾರ್ಯದರ್ಶಿ)ಬಸವ ನಾಯ್ಕ ಜಟ್ಕಲ್ (ಜೊತೆ ಕಾರ್ಯದರ್ಶಿ) ಇವರುಗಳನ್ನು ಪದಾಧಿಕಾರಿಗಳನ್ನಾಗಿ ಆಯ್ಕೆ ಮಾಡಲಾಯಿತು.

ಪುತ್ತೂರು

"ವರ್ಗ ಸಮಾಜದಲ್ಲಿ ಸ್ವರವಿಲ್ಲದವರು ಸಂಘಟನೆ ಮತ್ತು ಹೋರಾಟಗಳಿಂದ ತಮ್ಮನ್ನು ತಾವು ಗುರುತಿಸಿಕೊಳ್ಳಬೇಕು" ಎಂಬುದಾಗಿ.

ತಾ|| 15-9-1984 ರಂದು ಪುತ್ತೂರು ತಾಲೂಕಿನ ಮುಂಡೂರು ಮತ್ತು ಶಾಂತಿಗೋಡು ಗ್ರಾಮಗಳ ರೈತ ಸಂಘದ ಸಭೆಯನ್ನುದ್ದೇಶಿಸಿ, ತಾಲೂಕು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಕಾ|| ಬಿ. ರಾಮಕೃಷ್ಣನವರು ಎರಡು ಗ್ರಾಮಗಳ ರೈತ—ಕೃಷಿ ಕಾರ್ಮಿಕರಿಗೆ ಕರೆಯಿತ್ತರು.

ಗ್ರಾಮಾಂತರ ಮಟ್ಟದಿಂದಲೇ ಕ್ರಾಂತಿಕಾರಿ ನಾಯಕತ್ವ ಹಾಗೂ ಸಂಘಟನೆಯನ್ನು ಕಟ್ಟುವ ನಿಟ್ಟನಲ್ಲಿ ಕಾರ್ಯಕರ್ತರಿಗೆ ತರಬೇತಿ ಶಿಬಿರಗಳನ್ನು ನಡೆಸಲು ರೈತ ಸಂಘವು ಕಾರ್ಯಕ್ರಮವೊಂದನ್ನು ಹಮ್ಮಿಕೊಂಡಿದ್ದು, ಪುತ್ತೂರು ತಾಲೂಕಿನಾದ್ಯಂತ ರೈತ ಸಂಘವನ್ನು ಬಲಿಷ್ಟಗೊಳಿಸುವುದು ಈ ಕಾರ್ಯಕ್ರಮದ ಉದ್ದೇಶವೆಂದು ತಿಳಿಸಿದರು.

ಸಭೆಯನ್ನುದ್ದೇಶಿಸಿ, ಕಾ|| ಗಳಾದ ಚನಿಯಪ್ಪ ಗೌಡ, ಮಾಲಿಂಗ, ಮೊದಲಾದವರೂ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಹಿರಿಯ ರೈತ ಸಂಘದ ಮುಂದಾಳುಗಳಾದ ಕಾ||ಚನಿಯಪ್ಪ ಗೌಡ ಅವರು ವಹಿಸಿದ್ದು, ಕಾ|| ಪದ್ಮನಾಭನವರು ಸ್ವಾಗತಿಸಿ, ಕಾರ್ಯಕ್ರಮದ ಕೊನೆಯಲ್ಲಿ ವಾದನಾರ್ಪಣೆ ಗೈದರು. ಎರಡು ಗ್ರಾಮಗಳಿಂದ ತರಬೇತಿ ಶಿಬಿರ ನಡೆಸಲು ಎಂಟು ಮಂದಿಗಳಿರುವ ಸ್ವಾಗತ ಸಮಿತಿಯೊಂದನ್ನೂ ಸಭೆಯಲ್ಲಿ ರಚಿಸಲಾಯಿತು.

ರಾಯಚೂರು ಜಿಲ್ಲೆ

ಸಪ್ಟೆಂಬರ್ ಹತ್ತರಂದು ರಾಯಚೂರು ಜಿಲ್ಲಾಧಿಕಾರಿಯವರ ಕಛೇರಿಯನ್ನು ಎರಡು ಸಾವಿರ ರೈತ, ಕೃಷಿ ಕಾರ್ಮಿಕರು ವಿರೋಚಿತವಾಗಿ ಪಿಕೆಟಿಂಗ್ ನಡೆಸಿ ಜಿಲ್ಲಾಧಿಕಾರಿಯವರನ್ನು ಸೇರಿ ಯಾರನ್ನೂ ಒಳಗೆ ಬಿಡದಂತೆ ತಡೆಯಲಾಯಿತು. ಕಛೇರಿಯ ಹೊರಗಡೆ ನಿಂತೇ ಜಿಲ್ಲಾಧಿಕಾರಿಯವರು ಮಾತು ಕತೆ ನಡೆಸಿ, ಕಾಮಗಾರಿಯನ್ನ ಮಾತ್ರ ಕೇಳಿದಷ್ಟು ಕೊಡುವದಾಗಿ ಆಶ್ವಾಸನೆ ಕೊಟ್ಟು, ತುಂಗಭದ್ರಾ ಎಡದಂಡೆ ನಾಲೆಗೆ ಸರಿಯಾಗಿ ನೀರು ಬಿಟ್ಟರು, ಚೀಫ್ ಇಂಜಿನಿಯರ್ ಜೊತೆ ಚರ್ಚೆ ಮಾಡಲು ಜಿಲ್ಲಾಧಿಕಾರಿಯವರೇ ಸ್ವತಃ ಮುನಿರಾಬಾದಿಗೆ ಬಂದು, ನೀರನ್ನು ಗೇಜು ಪ್ರಕಾರ ಬಿಡುವಂತಾಗಿ, ನಷ್ಟವಾದ ಬೆಳೆಗೆ ಕುಡಾಯ ಮನ್ನಾ ಮಾಡಲಾಗಿನೆಯೆಂದು ಘೋಶಿಸಲಾಯಿತು.

ಲಿಂಗ ಸುಗೂರು ತಾಲೂಕಿನಲ್ಲಿ 800 ಜನ ರೈತ, ಕೃಷಿ ಕಾರ್ಮಿಕರು, ಮಸ್ಕಿ ನಾಲಾ ಯೋಜನೆ, ಬರಗಾಲ ಕಾಮಗಾರಿ ಹಾಗೂ ಇತರ ಬೇಡಿಕೆಗಳನ್ನು ಒತ್ತಾಯಿಸಿ 25 ಕಿಲೋಮೀಟರ್ ಕಾಲು ಜಾತಾ ನಡೆಸಿ, ಸಹಾಯಕ ಜಿಲ್ಲಾಧಿಕಾರಿಯವರಿಗೆ ಮನವಿ ಸಲ್ಲಿಸಲಾಯಿತು ಮಸ್ಕಿ ನಾಲಾ ಯೋಜನೆಗೆ ಹನ್ನೆರಡು ಲಕ್ಷ ಮಂಜೂರು ಮಾಡಲಾಗಿದೆ.

ದೇವದುರ್ಗ ತಾಲೂಕಿನ ಸಾವಿರಾರು ರೈತ ಕೃಷಿ ಕಾರ್ಮಿಕರು ಸಪ್ಟೆಂಬರ್ ಹನ್ನೆರಡರಂದು ಲಾರಿ, ಬಸ್‌ಗಳನ್ನು ಪುಕ್ಕಟೆಯಾಗಿ ಹತ್ತಿ ಹೋಗಿ, ತಹಶಿಲ್ದಾರ್ ಕಾರ್ಯಾಲಯ, ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಾರ್ಯಾಲಯವನ್ನು ಪಿಕೆಟಿಂಗ್ ನಡೆಸಲಾಗಿ ಕಾಮಗಾರಿಯನ್ನು ಶುರು ಮಾಡಲಾಯಿತು.

ತ್ರಿಪುರಾ : ಬುಡಕಟ್ಟು ಜನಾಂಗ ಪ್ರಶ್ನೆ ಮತ್ತು ಎಡರಂಗ ಸರಕಾರ

ಕಳೆದ ಕೆಲವು ಸಂಚಿಕೆಗಳಿಂದ 'ಐಕ್ಯರಂಗ' ದಲ್ಲಿ ಪ್ರಕಟವಾಗುತ್ತಿದ್ದ ಕಾ. ಬಿ. ಟಿ. ರಣದಿವೆಯವರ ಲೇಖನದಲ್ಲಿ ಬೂರ್ಜ್ವಾ-ಭೂಮಾಲಕ ಆಳುವ ವರ್ಗಗಳು ಭಾರತದ ದೇಶೀಯ ಪ್ರಶ್ನೆ ಪರಿಹರಿಸುವಲ್ಲಿ ವಿಫಲವಾಗಿವೆ, ಅವರ ವರ್ಗ ಧೋರಣೆಗಳಿಂದ ಸಮಸ್ಯೆ ಉಲ್ಬಣಗೊಂಡಿದೆ. ಆದರೆ ಸಿ. ಪಿ. ಐ. [ಎಂ] ಮತ್ತು ಪ್ರಜಾಪ್ರಭುತ್ವ, ಚಳುವಳಿ ಶಕ್ತಿಶಾಲಿಯಾಗಿದ್ದಲ್ಲಿ ಪರಿಸ್ಥಿತಿ ಭಿನ್ನವಾಗಿವೆ ಎಂಬುದನ್ನು ಓದಿರುವಿರಿ. ತ್ರಿಪುರಾ ಇದಕ್ಕೊಂದು ಉತ್ತಮ ನಿದರ್ಶನ.

ಹಿನ್ನೆಲೆ :

ಭಾರತದ ವಿಭಜನೆಯ ಮೊದಲು ತ್ರಿಪುರಾ ಒಂದು ಬುಡಕಟ್ಟು ಮುಖ್ಯಸ್ಥನ ಅಡಿಯಲ್ಲಿದ್ದ ಬುಡಕಟ್ಟು ರಾಜ್ಯವಾಗಿತ್ತು. ಮೊದಲೇ ಇಲ್ಲಿಗೆ ಬಂಗಾಲಿಗಳ [ಹಿಂದೂ ನಿರಾಶ್ರಿತರು ಮತ್ತು ಮುಸ್ಲಿಂ ಭೂಹೀನ ಕಾರ್ಮಿಕರು] ವಲಸೆ ಆರಂಭವಾಗಿದ್ದರೂ ವಿಭಜನೆಯ ನಂತರ ಅದು ಅಗಾಧ ಪ್ರಮಾಣದಲ್ಲಿ ನಡೆಯಿತು. ಎಷ್ಟೆಂದರೆ ಆ ರಾಜ್ಯದ ಜನಸಂಖ್ಯೆ 6 ಲಕ್ಷದಿಂದ 22 ಲಕ್ಷಕ್ಕೆ ಏರಿತು, ಅದರಲ್ಲಿ ಬುಡಕಟ್ಟು ಜನರ ಸಂಖ್ಯೆ ಕೇವಲ 29 ಶೇಕಡಾ !

30 ವರ್ಷಗಳ ತನ್ನ ಆಡಳಿತದಲ್ಲಿ ಕಾಂಗ್ರೆಸ್ ಸರ್ಕಾರ ಬುಡಕಟ್ಟು ಜನಾಂಗಗಳ ಪ್ರಶ್ನೆಯ ಬಗ್ಗೆ ಯೋಚನೆಯೇ ಮಾಡಲಿಲ್ಲ. ಅಷ್ಟೇ ಅಲ್ಲ ಅಲ್ಲಿ ರೈಲು, ಕೈಗಾರಿಕೆಗಳ ಮೂಲಕ ನಿರಾಶ್ರಿತರಿಗೆ ಏನಾದರೂ ಜೀವನೋಪಾಯ ಕಲ್ಪಿಸುವ ಬದಲು ಅದು ನಾಚಿಕೆಯಿಲ್ಲದೆ ಬುಡಕಟ್ಟು ಜನಗಳ ಭೂಮಿಯನ್ನು ಕಬಳಿಸಿಕೊಳ್ಳಲು ಬಂಗಾಲೀ ನಿರಾಶ್ರಿತರಿಗೆ ಪ್ರೋತ್ಸಾಹ, ಪೋಲೀಸ್ ನೆರವು ಎಲ್ಲವನ್ನೂ ನೀಡಿತು !

ಈ ಧೋರಣೆ ಸಾಭಾವಿಕವಾಗಿಯೇ ಬುಡಕಟ್ಟು ಜನತೆ ಮತ್ತು ಇತರರ ನಡುವೆ ಕಹಿ ಭಾವನೆ ಹರಡಿತು. ಆದರೆ ಈಶಾನ್ಯ ಭಾಗದ ಈ ಪ್ರದೇಶದಲ್ಲಿ ಉಳಿದೆಡೆ ಆದಂತೆ ಈ ಭಾವನೆಯ ದುರ್ಲಾಭ ಪಡೆಯಲು ರಾಷ್ಟ್ರವಿರೋಧಿ ಪ್ರತ್ಯೇಕತಾವಾದಿಗಳಿಗೆ ಸಾಧ್ಯವಾಗಲಿಲ್ಲ. ಕಾರಣ ಕೆಂಬಾವುಟದ ಮತ್ತು ಗಣಮುಕ್ತಿ ಪರಿಷತ್ತಿನ ಪ್ರಭಾವ. ಆದ್ದರಿಂದಲೇ ಪ್ರಧಾನಮಂತ್ರಿ ಹಾಗೂ ಆಕೆಯ ಪಕ್ಷ ಬುಡಕಟ್ಟು ಜನರಲ್ಲಿ ಹುಟ್ಟಿ ಬರುತ್ತಿದ್ದ ಒಂದು ಚಿಕ್ಕ ಶಿಕ್ಷಿತ ಮಧ್ಯಮ ವರ್ಗವನ್ನು ಆರಂಭದಿಂದಲೇ ಕಮ್ಯೂನಿಸ್ಟರ ವಿರುದ್ಧ ಬಳಸಲು ಪಾಲಿಸಿ-ಪೋಷಿಸಿ ಬೆಳೆಸಿತು. ತ್ರಿಪುರಾ ಉಪಜಾತಿ ಯುವ ಸಮಿತಿ [ಟಿ. ಯು. ಜೆ. ಎಸ್.] ಹಾಗೂ ಅದರ ವಿದ್ಯಾರ್ಥಿ ವಿಭಾಗ ಟ್ರೈಬಲ್ ಸ್ಟೂಡೆಂಟ್ಸ್ ಫೆಡರೇಷನ್ ಹುಟ್ಟಿದ್ದು ಹೀಗೆ.

ಅಪವಿತ್ರ ಕೂಟ

ಎಡರಂಗ ಸರ್ಕಾರ ಸ್ಥಾಪನೆಯಾಗುವವರೆಗೆ ಈ ಟಿ.ಯು.ಜೆ.ಎಸ್. ಹಾಗೂ ಟಿ. ಎಸ್. ಎಫ್.ಗೆ ಬಹಳಷ್ಟು ಬುಡಕಟ್ಟು ಯುವಜನರನ್ನು ಗೊಂದಲದಲ್ಲಿ ಇಡಲು ಸಾಧ್ಯವಾಗಿತ್ತು. ಜೂನ್ 1980ರ ಗಲಭೆ ನಂತರ ಇವರಲ್ಲಿ ಹಲವರು ಬಾಂಗ್ಲಾ ದೇಶದಲ್ಲಿ ತಳವೂರಿದ್ದ ತೀವ್ರಗಾಮಿಗಳೊಂದಿಗೆ ಸೇರಿಕೊಂಡರು. ಸಿ. ಪಿ. ಐ. [ಎಂ] ಹಾಗೂ ಗಣಮುಕ್ತಿ ಪರಿಷತ್‌ನ ಕಾರ್ಯಕರ್ತರಮೇಲೆ ಹಲ್ಲೆ ನಡೆಸಲಾರಂಭಿಸಿದರು. ಬುಡಕಟ್ಟು ಜನತೆಯ ಭಾಷೆ, ಶಿಕ್ಷಣ, ಅಭಿವೃದ್ಧಿ ಎಲ್ಲದರ ಬಗ್ಗೆಯೂ ಅತೀವ ನಿರ್ಲಕ್ಷ್ಯಹೊಂದಿದ್ದ ಕಾಂಗ್ರೆಸ್ [ಐ], ಅದೇ ಬುಡಕಟ್ಟನಿಂದ ಬಂದ ಒಂದು ವಿಭಾಗ ಹಾಗೂ ಅದೇ ಬುಡಕಟ್ಟಿನ ಜನರ ವಿರುದ್ಧ ಆಕ್ರಾಮಕ ಚಟುವಟಿಕೆಯಲ್ಲಿ ತೊಡಗಿರುವ ಆನಂದ ಮಾರ್ಗದ ನೇತೃತ್ವದ ಸಂಕುಚಿತವಾದೀ ಆಮ್ರ ಬಂಗಾಲಿಗಳ ಅಪವಿತ್ರ ಕೂಟದ ಹಿನ್ನೆಲೆಯಲ್ಲಿ ಎಡರಂಗ ಸರ್ಕಾರ 70./. ಜನತೆಯ ಅನುಮತಿ ಪಡೆದ ತನ್ನ ಚುನಾವಣಾ ಭರವಸೆಗಳನ್ನು ಕಾರ್ಯರೂಪಕ್ಕಿಳಿಸಲಾರಂಭಿಸಿತು.

ಕೇವಲ ಆರ್ಥಿಕ ಪ್ರಶ್ನೆಯಲ್ಲ

ಸಿ. ಪಿ. ಐ. [ಎಂ] ಮತ್ತು ಎಡರಂಗ ಸರ್ಕಾರಗಳ ಮಟ್ಟಿಗೆ ಬುಡಕಟ್ಟು ಜನರ ಸಮಸ್ಯೆಗಳು ಕೇವಲ ಆರ್ಥಿಕ ಸಮಸ್ಯೆಗಳಾಗಿರದೆ ಪ್ರತಿಯೊಂದೂ ಬುಡಕಟ್ಟು ಗುಂಪಿನ ವಿಶಿಷ್ಟ ಅಸ್ಮಿತೆಯನ್ನು ಬೆಳೆಸುವ ಸಮಸ್ಯೆಗಳು. ತ್ರಿಪುರಾದ ಬುಡಕಟ್ಟು ಜನರು ತಮ್ಮಲ್ಲಿ ಬಹುಸಂಖ್ಯಾತರು ಆಡುವ ಭಾಷೆ ಕೊಕ್ ಬೊರಾಕ್ ಗೆ ಮಾನ್ಯತೆ ನೀಡಲು ನಡೆಸಿದ ದೀರ್ಘ ಚಳುವಳಿಯಲ್ಲಿ ವ್ಯಕ್ತಗೊಂಡ ಮುಖ್ಯ ಅಂಶ ಎಂದರೆ ಇದೇ ಕಾಂಗ್ರೆಸ್ [ಐ] ಈ ಬೇಡಿಕೆಯನ್ನು ಸಹಾ ನಿರಾಕರಿಸುತ್ತ ಬಂದಿತ್ತು. ಆದರೆ ಎಡರಂಗ ಸರ್ಕಾರ ಅದಕ್ಕೆ ಅಧಿಕೃತ ಭಾಷೆಯ ಸ್ಥಾನ ನೀಡಿದ್ದು ಮಾತ್ರವಲ್ಲ, ಅದರ ಅಭಿವೃದ್ಧಿಗೆ ಹಲವು ದಿಟ್ಟ ಕ್ರಮಗಳನ್ನು ಕೈಗೊಂಡಿತು.

ದೀರ್ಘ ಚರ್ಚೆಯ ನಂತರ ಕೊಕ್ ಬೊರಾಕ್ ಭಾಷೆಗೆ ಬಂಗಾಲೀ ಲಿಪಿಯನ್ನು ಸ್ವೀಕರಿಸಲಾಯಿತು. ನಂತರ ಅದಕ್ಕೆ ಒಂದು ವ್ಯಾಕರಣ ಹಾಗೂ ಪುಸ್ತಕಗಳನ್ನು ಬರೆಯ ಬೇಕಾಗಿತ್ತು. ಈಗ ಪ್ರಾಥಮಿಕ ಹಂತದಲ್ಲಿ ಶಿಕ್ಷಣ ಕೊಕ್ ಬೊರಾಕ್ ಭಾಷೆಯಲ್ಲಿದೆ. ಇದಕ್ಕಾಗಿ ಸುಮಾರು ಸಾವಿರಕ್ಕೂ ಹೆಚ್ಚು ಬುಡಕಟ್ಟು ಅಧ್ಯಾಪಕರನ್ನು ನೇಮಿಸಿ ಅವರಿಗೆ ತರಬೇತಿ ನೀಡಲಾಗಿದೆ. ಕಳೆದ ಆರು ವರ್ಷಗಳಲ್ಲಿ ಎಲ್ಲ ಬುಡಕಟ್ಟು ಪ್ರದೇಶಗಳ ಮೂಲೆ ಮೂಲೆಯಲ್ಲೂ ಶಿಕ್ಷಣ ಅರಳಿದೆ.

ಲೇವಾದೇವಿಗಾರರಿಂದ ಮುಕ್ತಿ

ಬುಡಕಟ್ಟು ಜನಾಂಗಗಳು ದಟ್ಟವಾಗಿರುವ ಪ್ರದೇಶಗಳಲ್ಲಿ ಅತ್ಯಂತ ಕ್ರೂರ ಶೋಷಣೆ ನಡೆಯುವುದು ಲೇವಾದೇವಿಗಾರರಿಂದ. ಈ ಲೇವಾದೇವಿಗಾರ ಜತೆಗೆಅಪ್ರಾಮಾಣಿಕ, ವ್ಯಾಪಾರಿ, ಕಾಳಸಂತೆಕೋರ ಮತ್ತು ಎಲ್ಲಕ್ಕೂ ಮಿಗಿಲಾಗಿ ಅತ್ಯಂತ ನೀಚರೀತಿಯಲ್ಲಿ ಜಮೀನನ್ನು ಕಬಳಿಸುವವನೂ ಆಗಿದ್ದ. ಇವರೆಲ್ಲಾ ಹೆಚ್ಚಾಗಿ ಮುಂದುವರಿದ ಬಂಗಾಲೀ ಕೋಮಿನಿಂದ ಬಂದಿದ್ದು ಪೋಲೀಸ್ ಹಾಗೂ ರೆವಿನ್ಯೂ ಇಲಾಖೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಬಂಗಾಲಿಗಳೊಂದಿಗೆ ಸಂಪರ್ಕಹೊಂದಿರುತ್ತಿದ್ದರಿಂದ ಬುಡಕಟ್ಟು ಜನರಿಗೆ ಯಮಪ್ರಾಯರಾಗಿದ್ದರು. ಎಡರಂಗ ಸರ್ಕಾರ ಇವರ ಮೇಲಿನ ಬುಡಕಟ್ಟು ಜನಗಳ ಅವಲಂಬನೆಯನ್ನು ನಿವಾರಿಸಲು ದೊಡ್ಡ ಹಾಗೂ ಬಹೂಪಯೋಗೀ ಸಂಘಗಳನ್ನು [LAMPS] ಆರಂಭಿಸಿತು. ಇದುವರೆಗೆ 76706 ಬುಡಕಟ್ಟು ಕುಟುಂಬಗಳಿಗೆ ಇವುಗಳ ಮೂಲಕ ಬಳಕೆದಾರ ಸಾಲ ನೀಡಲಾಗಿದೆ. ಸರ್ಕಾರದ ಈ ಕ್ರಮದಿಂದಾಗಿ ಮಾಜೀ ಲೇವಾದೇವಿಗಾರರು ಈಗ ಎಡರಂಗ ಸರ್ಕಾರದ ವಿರುದ್ಧ ಕಾಂಗ್ರೆಸ್ (ಐ) ಹಾಗೂ ಆಮ್ರ ಬಂಗಾಲೀ ಚಳುವಳಿಯ ಮುಖ್ಯ ಆಧಾರವಾಗಿಬಿಟ್ಟಿದ್ದಾರೆ !

ಎಡರಂಗ ಪರಿಹರಿಸಿದ ಮತ್ತೊಂದು ಮುಖ್ಯ ಸಮಸ್ಯೆಯೆಂದರೆ ಬೇನಾಮೀ ಜಮಿನುಗಳ ಒಡೆತನವನ್ನು ಮತ್ತೆ ಬುಡಕಟ್ಟು ಜನಗಳಿಗೆ ಮರಳಿಸಿದ್ದು. ಬಂಗಾಲೀ ಲೇವಾದೇವಿಗಾರರು ಇದನ್ನು ವಿರೋಧಿಸಿ ರಕ್ತ ಹರಿಸಲೂ ಹಿಂಜರಿಯಲಿಲ್ಲ. ಆದರೂ ಸರ್ಕಾರ ಈ ಬಗ್ಗೆ ಕಾನೂನು ಮಾಡಿ ಅದನ್ನು ಅಕ್ಷರಶಃ ಜ್ಯಾರಿಗೊಳಿಸಿತು. ಇದರಿಂದ ತೊಂದರೆಗೀಡಾದ ಬಂಗಾಲೀ ನಿರಾಶ್ರಿತರಿಗೂ ಪುನರ್ವಸತಿ ಕಲ್ಪಿಸಲಾಯಿತು. ಕಳೆದ ಆರು ವರ್ಷಗಳಲ್ಲಿ 739 ಕುಟುಂಬಗಳಿಗೆ ಜಮೀನು ಮರಳಿ ನೀಡಲಾಗಿದೆ ಮತ್ತು 6798 ಬುಡಕಟ್ಟುಜ್ಹೂಮಿಯಾಗಳಿಗೆ ಹಾಗೂ ಭೂಹೀನ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲಾಗಿದೆ.

ದುರ್ಗಮಸಮಸ್ಯೆಯೊಂದರ ಪರಿಹಾರ

ಬುಡಕಟ್ಟು ಜ್ಹೂಮಿಯಾಗಳ ಆರ್ಥಿಕ ಪುನರ್ವಸತಿ ಈ ಹಿಂದೆ ಅತ್ಯಂತ ದುರ್ಗಮ ಸಮಸ್ಯೆಯಾಗಿತ್ತು. ಕಾಂಗ್ರೆಸ್ ಆಡಳಿತದಲ್ಲಿದ್ದ ಭ್ರಷ್ಟ ವರ್ತನೆಗಳಿಂದ ಈಜನಗಳಜ್ಹೂಮಿಯಾ ಕೆಲಸಗಳಿಂದಾಗಿ ಸುರಕ್ಷಿತ ಅರಣ್ಯಗಳಿಗೆ ವ್ಯಾಪಕ ನಷ್ಟವುಂಟಾಗುತ್ತಿತ್ತು. ಆದರೆ ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಇದಕ್ಕೆ ಒಂದು ಉತ್ತಮ ಪರಿಹಾರ ಕಂಡುಹಿಡಿಯಿತು. ರಬ್ಬರ್ ತೋಟಗಳನ್ನು ಆರಂಭಿಸಿ 20 ಸಾವಿರ ಜ್ಹೂಮಿಯಾ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸುವ ಯೋಜನೆಯನ್ನು ಜ್ಯಾರಿಗೊಳಿಸಿತು. ಇದರ ಪ್ರಕಾರ ಪ್ರತಿಯೊಂದು ಕುಟುಂಬಕ್ಕೂ 25-30 ಸಾವಿರ ಖರ್ಚಾಗುತ್ತದೆ. ಕಾಂಗ್ರೆಸ್ ಸರ್ಕಾರ ಇದಕ್ಕೆ ಕೊಟ್ಟದ್ದು ಕೇವಲ 300-500ರೂ !

ಇದೇ ರೀತಿ ಚಹಾ, ಗೋಡಂಬಿ ಹಾಗೂ ತೋಟಗಾರಿಕೆ ಕ್ಷೇತ್ರಗಳಲ್ಲಿ ಜ್ಹೂಮಿಯಾ ಬುಡಕಟ್ಟು ಜನಗಳ ಪುನರ್ವಸತಿಯ ಯೋಜನೆ ಹಾಕಿಕೊಳ್ಳಲಾಗಿದೆ. 2119 ಬುಡಕಟ್ಟು ಕುಟುಂಬಗಳಿಗೆ ಹಸು, ಹಂದಿ ಇತ್ಯಾದಿ. 668 ಕುಟುಂಬಗಳಿಗೆ ಕೋಳಿಸಾಕಣೆ ಸೌಲಭ್ಯ ಒದಗಿಸಲಾಗಿದೆ. ಅದೇ ರೀತಿ ಬೀಜ, ಮೀನುಗಾರಿಕೆ ಸೌಲಭ್ಯ ಒದಗಿಸಲಾಗಿದೆ. ಈಗ ಅರಣ್ಯ ಇಲಾಖೆ ಹಿಂದಿನಂತೆ ಬುಡಕಟ್ಟು ಜಮ್ಹಿಯಾಗಳನ್ನು ಶಿಕ್ಷೆಗೆ ಗುರಿಪಡಿಸುತ್ತಿಲ್ಲ.

ಶಿಕ್ಷಣ ಮತ್ತು ಉದ್ಯೋಗ

ಜ್ಹೂಮಿಯಾ ಅಲ್ಲದ ಸ್ವಲ್ಪ ಜಮೀನು ಹೊಂದಿರುವ ಇತರ ಬುಡಕಟ್ಟು ಜನರ ಮಕ್ಕಳಿಗೂ ಅಭೂತಪೂರ್ವ ಶಿಕ್ಷಣ ಸೌಲಭ್ಯ ನೀಡಲಾಗಿದೆ.

(6 ನೇ ಪುಟ ನೋಡಿ)

ನನ್ನ ರಕ್ತದಲ್ಲಿ ಮಾತಾಡಿ

ನಿಮ್ಮ ಸತ್ತ ಬಾಯಿಗಳಿಗಾಗಿ
ಮಾತಾಡಲು ನಾನು ಬಂದಿದ್ದೇನೆ.
ಜಗತ್ತಿನ ಸುತ್ತ ಸತ್ತ ತುಟಿಗಳು ಸಭೆ ಸೇರಲಿ,
ನಿಮ್ಮೊಡನೆ ಲಂಗರು ಹಾಕಿ ನಾನೂ ನಿಂತಿರುವ ಹಾಗೆ
ಆಳಗಳಿಂದ ಈ ದೀರ್ಘ ರಾತ್ರಿಯನ್ನು ನೆಯ್ದು
ನನಗೆ ಕೊಡಿ.
ಎಲ್ಲವನ್ನೂ ಹೇಳಿ ನನಗೆ,
ಪ್ರತಿ ಸರಪಳಿಯ ಕತೆ
ಪ್ರತಿ ಕೊಂಡಿಯ ಕತೆ ;
ಪ್ರತಿ ಹೆಜ್ಜೆಗೂ
ನೀವು ಬಚ್ಚಿಟ್ಟಿರುವ ಚಾಕುಗಳನ್ನು ತೆಗೆದು
ಚೂಪು ಮಾಡಿ
ನನ್ನ ಎದೆಯೊಳಗೆ ತುರುಕಿರಿ—
ಸೂರ್ಯ ಒಡೆದು ಮಳೆ ಬೀಳುವ ಹಾಗೆ,
ಹೂತಿಟ್ಟ ಚಿರತೆಗಳ ಮಹಾನದಿಯ ಹಾಗೆ
ನನ್ನ ಕೈಗೆ ತುರುಕಿರಿ.
ನನ್ನನ್ನು ಅಳಲು ಬಿಡಿ ; ಗಂಟೆಗಟ್ಟಲೆ ದಿನಗಟ್ಟಲೆ
ವರ್ಷಗಟ್ಟಲೆ
ಕುರುಡು ಕಾಲಗಟ್ಟಲೆ ಚಿಕ್ಕಿ-ಶತಮಾನಗಟ್ಟಲೆ.

ಮೌನವನ್ನು ಕೊಡಿ ನನಗೆ,
ನೀರು ಕೊಡಿ
ನಿರೀಕ್ಷೆ ಕೊಡಿ.
ಪ್ರಯತ್ನ ಕೊಡಿ, ಕಬ್ಬಿಣ ಕೊಡಿ, ಜ್ವಾಲಾಮುಖಿ ಕೊಡಿ ನನಗೆ

ನಿಮ್ಮ ದೇಹಗಳು
ಸೂಜಿಗಲ್ಲಿನ ಹಾಗೆ ನನ್ನ ದೇಹಕ್ಕೆ ಅಂಟಲಿ.
ಬೇಗ ಬನ್ನಿ
ನನ್ನ ನರಗಳಿಗೆ, ನನ್ನ ಬಾಯಿಗೆ,
ನನ್ನ ಸ್ವರದಲ್ಲಿ ಮಾತಾಡಿ
ನನ್ನ ರಕ್ತದಲ್ಲಿ ಮಾತಾಡಿ.

—ಪಾಬ್ಲೊ ನೆರೂದ

ಅನುವಾದ : ತೇಜಸ್ವಿನಿ ನಿರಂಜನ
'ಮಾಚ್ಚು ಪಿಚ್ಚುವಿನ ಶಿಖರಗಳು' ಕವಿತೆಯಿಂದ ಆಯ್ದ ಒಂದು ಭಾಗ

ಮಾರ್ಕ್ಸ್‌ವಾದ ಮತ್ತು ಭಾರತದಲ್ಲಿ ದೇಶೀಯತೆಯ ಪ್ರಶ್ನೆ | 6

– ಬಿ. ಟಿ. ರಣದಿವೆ

ಸಮಸ್ಯೆಯ ಪರಿಹಾರ: ಎಡ ಪಕ್ಷಗಳು - ಕಾರ್ಮಿಕ ವರ್ಗದ ಜವಾಬ್ದಾರಿ

"ಜನಗಳು ನಿಜವಾಗಿಯೂ ಒಗ್ಗಟ್ಟಾಗಬೇಕಾದರೆ ಅವರ ಹಿತಾಸಕ್ತಿಗಳು ಸಮಾನವಾಗಬೇಕಾಗುತ್ತದೆ. ಹಾಗೆ ಆಗಬೇಕಾದರೆ ಸದ್ಯದ ಆಸ್ತಿ ಸಂಬಂಧಗಳನ್ನು ನಿರ್ಮೂಲ ಮಾಡಬೇಕು. ಯಾಕೆಂದರೆ, ಕೆಲವು ದೇಶಗಳು ಇನ್ನು ಕೆಲವು ದೇಶಗಳನ್ನು ಶೋಷಿಸುವ ಮೂಲ ಈ ಆಸ್ತಿ ಸಂಬಂಧಗಳಲ್ಲೇ ಅಡಕವಾಗಿದೆ. ಈ ಆಸ್ತಿ ಸಂಬಂಧಗಳ ನಿರ್ಮೂಲನೆ ಬಗ್ಗೆ ಕೇವಲ ಕಾರ್ಮಿಕ ವರ್ಗಕ್ಕಷ್ಟೆ ಆಸಕ್ತಿಯಿದೆ." ಮಾರ್ಕ್ಸ್ ಮತ್ತು ಎಂಗೆಲ್ಸ್. ಕಾರ್ಮಿಕ ವರ್ಗದ್ದು ಅಂತರಾಷ್ಟ್ರೀಯ ದೃಷ್ಟಿ. "ಕಾರ್ಮಿಕ ವರ್ಗದ ಪಕ್ಷ ಸಾಧ್ಯವಾದಷ್ಟು ದೊಡ್ಡ ಪ್ರಭುತ್ವವನ್ನು ಸೃಷ್ಟಿಸಲು ಹೆಣಗುತ್ತದೆ. ಯಾಕೆಂದರೆ ಇದು ದುಡಿಯುವ ಜನತೆಗೆ ಪ್ರಯೋಜನ ಕಾರಿ. ಆದರೆ ಅದು ಈ ಉದ್ದೇಶವನ್ನು ಹಿಂಸೆಯ ಮೂಲಕ ಸಾಧಿಸ ಬಯಸುವುದಿಲ್ಲ. ಬದಲಿಗೆ ಎಲ್ಲಾ ದೇಶೀಯ ಗುಂಪುಗಳ ಕಾರ್ಮಿಕರ ಮತ್ತು ದುಡಿಯುವ ಜನಗಳ ಒಂದು ಅನಿರ್ಬಂಧಿಕ, ಸೋದರ ಒಕ್ಕೂಟದ ಮೂಲಕ ಸಾಧಿಸ ಬಯಸುತ್ತದೆ."—ಲೆನಿನ್

ದೇಶೀಯ ಪ್ರಶ್ನೆ ಕಾರ್ಮಿಕ ವರ್ಗದ ಕ್ರಾಂತಿಯ ಸಾರ್ವತ್ರಿಕ ಸಮಸ್ಯೆಯ ಒಂದು ಭಾಗ ; ಕಾರ್ಮಿಕ ವರ್ಗದ ಸರ್ವಾಧಿಕಾರದ ಪ್ರಶ್ನೆಯ ಒಂದು ಭಾಗ= ಸ್ಟಾಲಿನ್.

ಮಾರ್ಕ್ಸ್‌ವಾದ ದೇಶೀಯ ಸಮಸ್ಯೆಯ ಪರಿಹಾರವನ್ನು ಅ ಮೂ ರ್ತ ವಾ ಗಿ ಪರಿಶೀಲಿಸುವುದಿಲ್ಲ ; ಸಾಮಾಜಿಕ ಬೆಳವಣಿಗೆಯ ಸದ್ಯದ ಘಟ್ಟದಲ್ಲಿ, ವರ್ಗ ಹೋರಾಟದ ಸಂದರ್ಭದಲ್ಲಿ ಪರಿಶೀಲಿಸುತ್ತದೆ.

ನವ ವಿಮೋಚಿತ ಬಹು—ಭಾಷಾ ಪ್ರಭುತ್ವವಾದ ಭಾರತದ ಸಮಸ್ಯೆಯೆಂದರೆ ಬೂರ್ಜ್ವಾ—ಭೂಮಾಲಕ ಆಳ್ವಿಕೆಯಲ್ಲಿ ವಿವಿಧ ಭಾಷಾ ಘಟಕಗಳ ನಡುವೆ ಐಕ್ಯತೆಯ ಮತ್ತು ಸಮಾನತೆಯ ಭಾವವನ್ನು ಕಾಪಾಡಿಕೊಳ್ಳುವುದು ಹೇಗೆ, ಅಸಮಾನತೆಯ ಭಾವ ಈ ಪ್ರಭುತ್ವದ ಐಕ್ಯತೆಯನ್ನು ಮೀರಿ ಹೋಗಿ ಅದರ ವಿಘಟನೆಯಾಗದಂತೆ ನೋಡಿಕೊಳ್ಳುವುದು ಹೇಗೆ ಎಂಬುದು. ಬೂರ್ಜ್ವಾ ವರ್ಗಕ್ಕೆ ಈ ಸಮಸ್ಯೆ ಎದುರಿಸಲು ಸಾಧ್ಯವಿಲ್ಲ. ಯಾಕೆಂದರೆ ಅದಕ್ಕೆ ರಾಷ್ಟ್ರ ಎಂದರೆ ತಾನು ಪೂರ್ಣವಾಗಿ ಲಾಭ ಗಿಟ್ಟಿಸಬಹುದಾದ ಏಕೀಕೃತ, ವಿಸ್ತೃತ ಮಾರುಕಟ್ಟೆ ಮಾತ್ರ. ಇತರ ಜನ ವಿಭಾಗಗಳೂ ಸ್ಥಳೀಯ ದೇಸೀ ಸಂಕುಚಿತತೆಯಲ್ಲಿ ಕೊಚ್ಚಿಹೋಗುವ ಸಂಭವವಿದೆ. ಕೇವಲ ಕಾರ್ಮಿಕ—ವರ್ಗಕ್ಕೆ ಮಾತ್ರ ಅಖಿಲ—ಭಾರತ ದೃಷ್ಟಿಕೋನ, ವರ್ಗ ಐಕ್ಯತೆಯೊಂದಿಗೆ ದೇಶೀಯ ಸಮಾನತೆಯನ್ನು ಮಿಳನಗೊಳಿಸುವ ದೃಷ್ಟಿಕೋನ ಇದೆ.

ಭಾರತದ ದೇಶೀಯ ಸಮಸ್ಯೆಗೆ ಮೂರು ಆಯಾಮಗಳಿವೆ. 1. ಅಸಮಾನ ಆರ್ಥಿಕ ಬೆಳವಣಿಗೆ 2. ಭಾಷಾ ಸಮಾನತೆ 3. ಕೇಂದ್ರ ಮತ್ತು ರಾಜ್ಯಗಳ ನಡುವೆ ಸಮಾನ ಪಾಲುದಾರಿಕೆ.

ಸ್ವಾತಂತ್ರ್ಯ ನಂತರ ಇಲ್ಲಿನ ಆಳುವ ವರ್ಗಗಳು ಅನುಸರಿಸಿದ ಬಂಡವಾಳಶಾಹೀ ಮಾರ್ಗದಿಂದಾಗಿ ಬ್ರಿಟಿಶ್ ಆಳ್ವಿಕೆಯಲ್ಲಿ ಹುಟ್ಟಿಕೊಂಡ ಅಸಮಾನ ಕೈಗಾರಿಕಾ ಬೆಳವಣಿಗೆಯ ಪರಂಪರೆ ಮತ್ತಷ್ಟು ಮುಂದುವರಿದು ಸಂಕುಚಿತವಾದಿಗಳಿಗೆ, ಪ್ರತಿಕ್ರಿಯಾವಾದಿಗಳಿಗೆ ಈ ಅಸಂತೃಪ್ತಿಯ ದುರ್ಲಾಭ ಪಡೆದು ಸಮಾನತೆಯ ಹೋರಾಟವನ್ನು ಛಿದ್ರಗೊಳಿಸಲು ಅವಕಾಶ ಒದಗಿಸಿಕೊಟ್ಟಂತಾಗಿದೆ.

ಎಲ್ಲಾ ಭಾಷೆಗಳಿಗೆ ಸಮಾನತೆ ನೀಡುವಲ್ಲಿ ನಮ್ಮ ಸಂವಿಧಾನದ ವಿಫಲತೆ ದೇಶೀಯ ಸಮಸ್ಯೆ ಉಲ್ಬಣಗೊಳ್ಳಲು ಇನ್ನೊಂದು ಕಾರಣ. ಸ್ವಾತಂತ್ರ್ಯದ ಹೋರಾಟದ ದಿನಗಳಲ್ಲಿ ಆಗಿನ ಸನ್ನಿವೇಶದ ಒತ್ತಡದಿಂದಾಗಿ ಆಳುವ ವರ್ಗಗಳು ಭಾಷಾ ವಾರು ಆಧಾರಕ್ಕೆ ಮಾನ್ಯತೆ ನೀಡಿದರೂ ಕೂಡಾ ಸ್ವಾತಂತ್ರ್ಯ ನಂತರ ಅವರು ಇವನ್ನೆಲ್ಲಾ ಮರೆತು ತಮ್ಮ ನಿಜ ಬಣ್ಣ ತೋರಿಸಿದರು. ಭಾಷಾವಾರು ರಾಜ್ಯಗಳ ಬೇಡಿಕೆಯನ್ನು ಬಲ ಪ್ರಯೋಗದಿಂದ ದಮನ ಮಾಡಲು ಪ್ರಯತ್ನಿಸಿದರು ; ಹಿಂದಿಯನ್ನು, ಅದು ಸಾಧ್ಯವಾಗದಿದ್ದಾಗ ಅದರ ಜೊತೆಗೆ ಇಂಗ್ಲೀಷನ್ನು ಹೇರಲು ಪ್ರಯತ್ನಿಸುತ್ತಾ ಭಾಷಾ ಸಮಾನತೆಯ ನೀತಿಗೆ, ಜನ ಸಾಮಾನ್ಯರ ಭಾಷೆಗಳಿಗೆ ವಂಚನೆ ಮಾಡಿದರು. ಭಾಷಾ ಸಮಾನತೆಯ ನೀತಿ ಒಂದು ಸುಸಂಗತ ಪ್ರಜಾಪ್ರಭುತ್ವವಾದೀ ನಿಲುವಿನ ಅವಿಭಾಜ್ಯ ಅಂಗ. ಆದ್ದರಿಂದ ಎಲ್ಲಾ ವಿಷಯಗಳಲ್ಲೂ ಒಂದು ಸ್ಥಿರವಾದ ಪ್ರಜಾಪ್ರಭುತ್ವ ವಾದೀ ನಿಲುವು ತಳೆಯದೆ ಕೇವಲ ತಮ್ಮ ವರ್ಗ ಹಿತಾಸಕ್ತಿಗಳ ಪ್ರಕಾರವೇ ನಡೆಯುವ ಭಾರತದ ಆಳುವ ವರ್ಗಗಳಿಗೆ ಭಾಷಾ ಸಮಾನತೆಯ ನೀತಿ ಅನುಸರಿಸಲು ಸಾಧ್ಯವಾಗಿಲ್ಲ.

ಕೇಂದ್ರ ರಾಜ್ಯ ಸಂಬಂಧಗಳ ಪ್ರಶ್ನೆಯ ವಿಷಯದಲ್ಲೂ ಆಳುವ ವರ್ಗಗಳು ಸ್ವಾತಂತ್ರ್ಯ ಹೋರಾಟದ ಸಮಯದ ತಮ್ಮ ಹೇಳಿಕೆಗಳನ್ನು ಮರೆತು ಅಧಿಕಾರ ಕೈಗೆ ಬಂದ ಮೇಲೆ ಅಧಿಕಾರದ ಕೇಂದ್ರೀಕರಣ ಮಾಡುತ್ತಾ ಹೋಗಿ ತುರ್ತು ಪರಿಸ್ಥಿತಿಯ ಕಾಲದಲ್ಲಿ ರಾಜ್ಯಗಳು ಕೇವಲ ಕೇಂದ್ರದ ಅಡಿಯಾಳುಗಳಾಗಿಬಿಟ್ಟವು. ಇದರಿಂದಾಗಿ ಈಗ ಹಲವು ರಾಜ್ಯಗಳಲ್ಲಿ ಹದಗೆಡುತ್ತಿರುವ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಈ ಪ್ರಶ್ನೆ ಮಹತ್ವದ್ದಾಗಿದೆ. ಸದ್ಯದ ಆಸ್ತಿ ಸಂಬಂಧಗಳು ನಿರ್ಮೂಲವಾಗದೆ ಪೂರ್ಣ ದೇಶೀಯ ಸಮಾನತೆ ಸಾಧ್ಯವಿಲ್ಲ. ಈ ಸಮಸ್ಯೆಯ ಪರಿಹಾರ ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ಒಂದು ಅವಿಭಾಜ್ಯ ಅಂಗ. ಆದರೂ ಮಧ್ಯಂತರ ಪರಿಹಾರವೊಂದಕ್ಕೆ ಹೋರಾಟ ನಡೆಸುವುದೂ ರಾಷ್ಟ್ರೀಯ ಐಕ್ಯತೆಗೆ ಅತ್ಯಗತ್ಯ. ಕೇಂದ್ರ—ರಾಜ್ಯ ಸಂಬಂಧಗಳ ಪುನರ್ರಚನೆಯ ಬೇಡಿಕೆ ಅಂತಹ ಒಂದು ಪ್ರಮುಖ ಮಧ್ಯಂತರ ಕ್ರಮ.

ಕಾಂ. ಬಿ. ಟಿ. ರಣದಿವೆಯವರ **Marxism and the Nationality Question in India** ಲೇಖನದ ಕನ್ನಡ ಅನುವಾದದ 'ಐಕ್ಯರಂಗ' ದಲ್ಲಿ ಇದುವರೆಗೆ ಪ್ರಕಟವಾದ ಭಾಗಗಳ ಸಾರಾಂಶವಿದು ಈ ಲೇಖನದ ಮುಕ್ತಾಯ ಭಾಗವನ್ನು ಮುಂದೆ ಓದಿ........

ನಮ್ಮ ಪಕ್ಷ ಕೇಂದ್ರ-ರಾಜ್ಯ ಸಂಬಂಧಗಳ ಕುರಿತು ಶ್ರೀನಗರ ಸಮ್ಮೇಳನದಲ್ಲಿ ಪ್ರಸ್ತುತ ಪಡಿಸಿದ ಇತ್ತೀಚಿನ ಹೇಳಿಕೆಯಿಂದ ಕೆಲವು ಉದ್ಧರಣೆಗಳನ್ನು ಕೊಡೋಣ.

"ಕೇಂದ್ರ ಹಾಗೂ ಘಟಕ ರಾಜ್ಯಗಳ ನಡುವೆ ಪರಕೀಯ ಭಾವ ಹೆಚ್ಚುತ್ತಿರುವ ಸಂದರ್ಭದಲ್ಲಿ ಕೇಂದ್ರ-ರಾಜ್ಯ ಸಂಬಂಧಗಳ ಪ್ರಶ್ನೆ ಅತ್ಯಂತ ಮಹತ್ವ ಪಡೆದಿದೆ.

"ರಾಜ್ಯಗಳ ಅಧಿಕಾರಗಳ ಮೇಲೆ ನಡೆಯುತ್ತಿರುವ ಸತತ ಹಲ್ಲೆಗಳು ಹಾಗೂ ಅವುಗಳಲ್ಲಾಗುತ್ತಿರುವ ಸತತ ಸವೆತದಿಂದಾಗಿ ಉದ್ಭವಗೊಂಡ ಈ ಪರಕೀಯ ಭಾವ ದೇಶದ ಐಕ್ಯತೆಯನ್ನು ವಿಘಟಿತಗೊಳಿಸಲು ವಿಚ್ಛಿದ್ರಕಾರೀ ಶಕ್ತಿಗಳು ದಾಳಿ ನಡೆಸುತ್ತಿರುವ ಹಿನ್ನೆಲೆಯಲ್ಲಿ ಮತ್ತಷ್ಟು ಹೆಚ್ಚುತ್ತಿದೆ. ಈ ಪರಿಸ್ಥಿತಿ ಅಮೆರಿಕನ್ ಸಾಮ್ರಾಜ್ಯಶಾಹಿಗಳಿಗೆ ಪ್ರತ್ಯೇಕತಾವಾದಿಗಳಿಗೆ ಬಹಿರಂಗವಾಗಿಯೇ ಬೆಂಬಲ ನೀಡಲು ಮತ್ತು ಭಾರತದ ಸ್ವಾತಂತ್ರ್ಯ ಹಾಗೂ ಐಕ್ಯತೆಯ ವಿರುದ್ಧ ಪಿತೂರಿ ನಡೆಸಲು ಉತ್ತೇಜನ ನೀಡುತ್ತಿದೆ."

"ಆದ್ದರಿಂದ ಭಾರತದ ಒಗ್ಗಟ್ಟಿನ ಹಿತದೃಷ್ಟಿಯಿಂದ ಭಾರತ ಸಂಘದ ಕೇಂದ್ರ ಹಾಗೂ ಘಟಕಗಳ ನಡುವಿನ ಪರಕೀಯ ಭಾವದ ಪ್ರಕ್ರಿಯೆಯನ್ನು ತಡೆಹಿಡಿಯಬೇಕಾದುದು ತುರ್ತಿನ ಅವಶ್ಯಕತೆಯಾಗಿದೆ."

"ಆಂತರಿಕ ಐಕ್ಯತೆಯ ಈ ಸಮಸ್ಯೆಯನ್ನು ಭಾರತ ಹೊರಗಡೆಯಿಂದ ಎದುರಿಸುತ್ತಿರುವ ಪರಿಸ್ಥಿತಿಯ ಸಂದರ್ಭದಲ್ಲಿ ಪರಿಹರಿಸಬೇಕಾಗಿದೆ.

"ಭಾರತ ಕನಿಷ್ಟ ಎರಡು ಯುದ್ಧಗಳನ್ನು ಕಂಡಿದೆ. ಈಗಲೂ ಅಮೆರಿಕನ್ ಸಾಮ್ರಾಜ್ಯಶಾಹಿಗಳು ಪಾಕಿಸ್ತಾನದ ಮಿಲಿಟರಿ ಆಳರಸರನ್ನು ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಸಜ್ಜುಗೊಳಿಸುತ್ತಿದ್ದಾರೆ. ಆ ಮೂಲಕ ಭಾರತ ನಿರ್ವಾಹವಿಲ್ಲದೆ ತನ್ನ ಸಂಪನ್ಮೂಲಗಳಲ್ಲಿ ಹೆಚ್ಚೆಚ್ಚು ಭಾಗವನ್ನು ರಕ್ಷಣೆಯತ್ತ ತಿರುಗಿಸುವಂತೆ ಮಾಡುತ್ತಿದೆ."

ಜನತೆಯ ಆಕಾಂಕ್ಷೆಯ ದುರುಪಯೋಗ

"ದೇಶದ ಐಕ್ಯತೆಗೆ ನಮ್ಮ ಪಕ್ಷ ಬದ್ಧವಾಗಿದೆ ಹಾಗೂ ಎಲ್ಲಾ ವಿಘಟನಾಕಾರೀ ಶಕ್ತಿಗಳ ವಿರುದ್ಧ ಅದು ಹೋರಾಡುತ್ತದೆ; ದೇಶವನ್ನು ರಕ್ಷಿಸುವ, ಅದರ ಆರ್ಥಿಕ ಜೀವನವನ್ನು ಸಂಘಟಿಸಿ, ಕ್ರೋಢೀಕರಿಸುವ ಹಾಗೂ ವಿದೇಶೀ ಧೋರಣೆ, ಸಂಪರ್ಕವ್ಯವಸ್ಥೆ, ವಿದೇಶೀ ವ್ಯಾಪಾರ ಮುಂತಾದ ತನ್ನ ಇತರ ಕರ್ತವ್ಯಗಳನ್ನು ಪರಿಪಾಲಿಸುವ ಸಾಮರ್ಥ್ಯವುಳ್ಳ ಒಂದು ಪರಿಣಾಮಕಾರಿ ಹಾಗೂ ದಕ್ಷ ಕೇಂದ್ರ ಬೇಕೆಂಬುದು ಖಂಡಿತವಾಗಿಯೂ ನಮ್ಮ ನಿಲುವು."

ರಾಷ್ಟ್ರದ ಹಾಗೂ ನಮ್ಮ ಜನತೆಯ ಐಕ್ಯತೆಯನ್ನು ಕಾಪಾಡಿಕೊಳ್ಳುವಲ್ಲಿ ಹಾಗೂ ಹೊರಗಿನ ದಾಳಿಗಳಿಂದ ಅದನ್ನು ರಕ್ಷಿಸುವಲ್ಲಿ ನಾವು ಪ್ರಮುಖ ಆಸಕ್ತಿ ಹೊಂದಿದ್ದೇವೆ.

ಆದರೆ ದುರದೃಷ್ಟವಶಾತ್, ಜನತೆಯಲ್ಲಿರುವ ಐಕ್ಯತೆಯ ಈ ಆಕಾಂಕ್ಷೆಯನ್ನ, ಬಾಹ್ಯ ಆಕ್ರಮಣದಿಂದ ಭಾರತವನ್ನು ರಕ್ಷಿಸಬೇಕೆಂಬ ಬಯಕೆಯ ದುರ್ಲಾಭ ಪಡೆದು ಆಳುವಪಕ್ಷ ಘಟಕ ರಾಜ್ಯಗಳ ಅಧಿಕಾರಗಳನ್ನು ರದ್ದು ಮಾಡಿ, ಅವುಗಳಲ್ಲಿ ಸವೆತವುಂಟು ಮಾಡಿ ಕೇಂದ್ರಕ್ಕೆ ಸರ್ವಾಧಿಕಾರಗಳನ್ನು ಕಿತ್ತುಕೊಂಡಿದೆ. ಆಳುವ ಪಕ್ಷದ ವಿಚಾರದಲ್ಲಿ ಒಂದು ಬಲಿಷ್ಟ ಕೇಂದ್ರವೆಂದರೆ ತನ್ನ ಆದೇಶಗಳನ್ನು ಜ್ಯಾರಿಗೊಳಿಸುವ ಒಂದು ಸರ್ವಾಧಿಕಾರೀ ಕೇಂದ್ರ. ತುರ್ತುಪರಿಸ್ಥಿತಿಯ ದಿನಗಳ 42 ನೇ ತಿದ್ದುಪಡಿ ರಾಜ್ಯಗಳನ್ನು ಭಾರತ ಸರಕಾರಕ್ಕೆ ಅವಲಂಬಿಸಿದ ಒಂದು ಅಡಿಯಾಳು ಸ್ಥಾನಕ್ಕೆ ಇಳಿಸಿದ್ದು ಒಂದು ವಾಸ್ತವ ಸಂಗತಿ. ರಾಜ್ಯಗಳ ಅಧಿಕಾರಗಳ ಮೇಲೆ ಹಲ್ಲೆ ಸರ್ವಾಧಿಕಾರೀ ಆಳ್ವಿಕೆಯ ಅನಿವಾರ್ಯ ಅವಶ್ಯಕತೆ ಎಂಬುದನ್ನು ಇದು ತೋರಿಸಿಕೊಟ್ಟಿದೆ. ಆದ್ದರಿಂದ ಕೇಂದ್ರ-ರಾಜ್ಯಗಳ ಸಂಬಂಧದ ಪ್ರಶ್ನೆ ಭಾರತದ ಐಕ್ಯತೆಯನ್ನು ಕಾಪಾಡುವ ಪ್ರಶ್ನೆಗೆ ಸಂಬಂಧಪಟ್ಟದ್ದು ಮಾತ್ರವೇ ಅಲ್ಲ, ಈಗ ಅದು ಸರ್ವಾಧಿಕಾರ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳ ನಡುವಿನ ಹೋರಾಟದ ಒಂದು ಪ್ರಶ್ನೆಯೂ ಆಗಿಬಿಟ್ಟಿದೆ.

ಆಳವಾದ ವೈರುಧ್ಯ

ಇದು ಆಕಸ್ಮಿಕವೇನಲ್ಲ. ಸ್ವಾತಂತ್ರ್ಯನಂತರ ರಚಿಸಿದ ಸಂವಿಧಾನ ಹೆಸರಿಗೆ ಒಕ್ಕೂಟ ಸ್ವರೂಪದ್ದಾಗಿದ್ದರೂ ಕೇಂದ್ರೀಯ ಪ್ರಾಬಲ್ಯದ ಬೀಜಗಳು ಅದರೊಳಗೇ ಇದ್ದವು. ಅಭಿವೃದ್ಧಿಗಾಗಿ ಬಂಡವಾಳಶಾಹೀ ಮಾರ್ಗದಲ್ಲಿ ನಡೆಯಬೇಕಾದರೆ ಭಾರತ ಒಂದು ಏಕೀಕೃತವಾದ, ಸಮರೂಪದ ಮಾರು

ಕಟ್ಟಿಯಾಗಿ ದೊರೆಯಬೇಕು. ಸಂವಿಧಾನ ಈ ಅವಶ್ಯಕತೆಯನ್ನೇ ಪ್ರತಿಫಲಿಸಿತು. ಭೂಮಾಲಕರೊಂದಿಗೆ ಸಖ್ಯತೆ ಹೊಂದಿದ್ದ ಬಂಡವಾಳಶಾಹಿಗಳು ಪ್ರಜಾಪ್ರಭುತ್ವ, ರಾಜ್ಯಗಳ ಅಧಿಕಾರ ಅಥವಾ ಭಾಷೆಗಳ ಸಮಾನತೆಯ ಬೇಡಿಕೆಗಳು ತಮ್ಮ ಆರ್ಥಿಕ ಬೆಳವಣಿಗೆಗೆ ಹಾಗೂ ರಾಜಕೀಯ ಶಕ್ತಿಗೆ ಅಡಚಣೆಗಳು ಎಂದು ಬಗೆದಿದ್ದರು. ಸಂವಿಧಾನ ಅವರ ಈ ಅಗತ್ಯಗಳನ್ನು ಪ್ರತಿಫಲಿಸಿತು.

ಈ ಬಗ್ಗೆ ನಮ್ಮ ಪಕ್ಷದ ಕಾರ್ಯಕ್ರಮ ಹೀಗೆ ಹೇಳುತ್ತದೆ- "ಇಂತಹ ಸನ್ನಿವೇಶದಲ್ಲಿ ಕೇಂದ್ರ ಸರಕಾರ ಮತ್ತು ರಾಜ್ಯಗಳ ನಡುವೆ ವೈರುಧ್ಯ ಹೆಚ್ಚುವುದು ಸ್ವಾಭಾವಿಕವೇ ಆಗಿದೆ. ಈ ವೈರುಧ್ಯದ ಹಿಂದೆ ಇನ್ನೂ ಆಳವಾದ ಇನ್ನೊಂದು ವೈರುಧ್ಯ ಅಡಗಿದೆ. ಅದೆಂದರೆ ಒಂದೆಡೆ ಹಿರಿ ಬೂರ್ಜ್ವಾವರ್ಗ ಇನ್ನೊಂದೆಡೆ ಸಮಸ್ತ ಜನತೆ—ಇದರಲ್ಲಿ ಯಾವುದೇ ರಾಜ್ಯದ ಬೂರ್ಜ್ವಾ ವರ್ಗವೂ ಸೇರಿದೆ—ಇವುಗಳ ನಡುವಿನ ವೈರುಧ್ಯ. ಬಂಡವಾಳಶಾಹಿಯದಿಯಲ್ಲಿ ಅಭಿವೃದ್ಧಿಯ ಅಸಮಾನತೆ ಹೆಚ್ಚುತ್ತಾ ಹೋಗುವುದರಿಂದಾಗಿ ಈ ಆಳವಾದ ವೈರುಧ್ಯ ಸತತವಾಗಿ ಉಲ್ಬಣಗೊಳ್ಳುತ್ತಾ ಹೋಗುತ್ತದೆ."

ಕೇಂದ್ರದ ಪಟ್ಟಭದ್ರ-ಹಿತಾಸಕ್ತಿಗಳ ಪರವಾದ ಧೋರಣೆಗಳು, ಆರ್ಥಿಕ ಬಿಕ್ಕಟ್ಟು ಹಾಗೂ ಜನಸ್ತೋಮದ ಬಡತನದಿಂದಾಗಿ ಪ್ರಜಾ ಪ್ರಭುತ್ವ ಹಕ್ಕುಗಳ ಮೇಲೆ, ರಾಜ್ಯಗಳ ಹಕ್ಕುಗಳ ಮೇಲೆ ಆಘಾತಗಳುಂಟಾಗುತ್ತಿವೆ.

ರಾಜ್ಯಗಳ ಹಿಂದುಳಿಕೆ, ಅಸಮಾನತೆಗೆ ಕಾರಣ

ಈ ಪ್ರಕ್ರಿಯೆಯ ಜತೆಗೇ ರಾಜ್ಯಗಳು ಕೇಂದ್ರದ ಮೇಲೆ ಆರ್ಥಿಕವಾಗಿ ಅವಲಂಬಿಸಲೇಬೇಕಾದ ಪರಿಸ್ಥಿತಿಯೂ ಉಂಟಾಗಿದೆ. ರಾಜ್ಯಗಳು ಎತ್ತಬೇಕಾದ ಸಾರ್ವಜನಿಕ ಸಾಲದ ಮೊತ್ತವನ್ನು ಕೇಂದ್ರವೇ ನಿರ್ಧರಿಸುತ್ತದೆ; ಬ್ಯಾಂಕಿಂಗ್ ವಲಯ ನೀಡುವ ಸಾಲದ ಮೇಲೆ ಕೇಂದ್ರವೇ ಏಕಸ್ವಾಮ್ಯ ಹೊಂದಿದ್ದು, ರಾಜ್ಯಗಳು ತಾನು ಮಂಜೂರು ಮಾಡುವ ತಾತ್ಕಾಲಿಕ ಧನಸಹಾಯದ ಮೇಲೆ ಅವಲಂಬಿಸಿರುವಂತೆ ಮಾಡಿದೆ. ಇದೆಲ್ಲದರ ಜತೆಗೆ ರಾಜ್ಯಗಳ ಯೋಜನೆಯ ಪರಿಮಾಣವನ್ನು ನಿರ್ಧರಿಸುವ ವಿಧಾನ ರಾಜ್ಯಗಳ ಯೋಜನೆಯನ್ನು ಹಾಸ್ಯಾಸ್ಪದ ಮಟ್ಟಕ್ಕಿಳಿಸಿದೆ. ಅದನ್ನು ಕೇಂದ್ರಿಯ ಯೋಜನೆಯ ಒಂದು ಉಪಭಾಗವಾಗಿ ಮಾಡಿಬಿಟ್ಟು, ದೊಡ್ಡ ವ್ಯಾಪಾರಿಗಳ ಸೌಲಭ್ಯ ಹಾಗೂ ಅಗತ್ಯಗಳಿಗನುಗುಣವಾಗಿ ಕಡಿತಗೊಳಿಸುವುದೋ ಅಥವಾ ವಿಸ್ತರಿಸುವುದೋ ಮಾಡಲಾಗುತ್ತಿದೆ. ಯಾಕೆಂದರೆ ಕೇಂದ್ರೀಯ ಯೋಜನೆಗಳ ಯೋಜನಾ ದಿಕ್ಕಿನ ಮೇಲೆ ಈ ದೊಡ್ಡ ವ್ಯಾಪಾರಿಗಳದ್ದೇ ಪ್ರಾಬಲ್ಯವಿರುವುದು. ಇದರಿಂದಲೇ ಹಿಂದುಳಿಕೆ ಹಾಗೂ ಅಸಮಾನತೆಯ ಹೆಚ್ಚಳ ಉಂಟಾಗುವುದು. ರಾಜ್ಯಗಳ ಯೋಜನಾ ಪ್ರಕ್ರಿಯೆಯನ್ನು ರಾಜ್ಯಗಳ ಜನತೆಯ ಅವಶ್ಯಕತೆಗಳಿಗೆ ಅಥವಾ ಅಖಿಲ ಭಾರತ ಅಭಿವೃದ್ಧಿಯ ನಿಜವಾದ ಅವಶ್ಯಕತೆಗಳಿಗೆ ಅನುಗುಣವಾಗಿ ಹೊಂದಿಸಲಾಗುತ್ತಿಲ್ಲ.

ತೀವ್ರ ಕೇಂದ್ರೀಕರಣ

ವರ್ಷಗಳು ಕಳೆದಂತೆ ಕೇಂದ್ರದಲ್ಲಿ ಈ ರೀತಿಯ ರಾಜಕೀಯ ಹಾಗೂ ಆರ್ಥಿಕ ಕೇಂದ್ರೀಕರಣ ಹೆಚ್ಚಿ ಸಂವಿಧಾನದಲ್ಲಿ ಇದ್ದ ಕೆಲವೇ ಒಕ್ಕೂಟ ತತ್ತ್ವಗಳು ಸವೆಯುತ್ತಾ ಬಂದಿವೆ ತುರ್ತುಪರಿಸ್ಥಿತಿಯ 42 ನೇ ತಿದ್ದುಪಡಿ ಶಾಸನದೊಂದಿಗೆ ಇವು ತಾರಕವನ್ನು ತಲುಪಿತು. 42 ನೇ ತಿದ್ದುಪಡಿ ಕಾಯ್ದೆ ರಾಜ್ಯ ಸರಕಾರದ ಪೂರ್ವಾನುಮತಿಯಿಲ್ಲದೆ ಕೇಂದ್ರೀಯ ಮೀಸಲು ಪೋಲೀಸ್ ಪಡೆಯನ್ನು ರಾಜ್ಯಗಳಿಗೆ ಕಳಿಸಲು ಅವಕಾಶ ಒದಗಿಸಿದ್ದಲ್ಲದೆ, ಈ ಪಡೆಗಳನ್ನು ರಾಜ್ಯಗಳಿಗೆ ಕಳಿಸಿದಾಗ ಅವು ಕೇವಲ ಕೇಂದ್ರ ಸರಕಾರದಿಂದ ಮಾತ್ರ ಆದೇಶ ಪಾಲಿಸುವಂತೆ ವಿಧಿಸಿರುವುದು ತೀವ್ರ ಕೇಂದ್ರೀಕರಣದ ಸಾರಭೂತ ಅಂಶ.

ದೇಶದ ಯಾವುವೇ ಭಾಗದಲ್ಲಿ ಉಂಟಾಗುವ ಯಾವುದೇ ಸಮಸ್ಯೆಯಲ್ಲಿ ಮಧ್ಯ ಪ್ರವೇಶಿಸಿ ಅದನ್ನು ಎದುರಿಸಲು ಸಾಧ್ಯವಾಗುವಂತೆ ಸಂವಿಧಾನ ಕೇಂದ್ರ ಸರಕಾರವನ್ನು ಸಾಕಷ್ಟು ಅಧಿಕಾರಗಳಿಂದ ಸಜ್ಜಿತ ಗೊಳಿಸಿತ್ತು. ಇದಲ್ಲದೆ ಮೂವತ್ತು ವರ್ಷಗಳ ದೀರ್ಘ ಆಳ್ವಿಕೆಯ ಕಾಲದಲ್ಲಿ, ಹೆಚ್ಚಿನ ರಾಜ್ಯಗಳನ್ನು ಅನೇ ಪಕ್ಷ ಆಳುತ್ತಿದ್ದ ಕಾಲದಲ್ಲಿ ತಾನೇ ಪಡೆದುಕೊಂಡ ಅಧಿಕಾರಗಳೂ ಅದಕ್ಕಿವೆ. ಈ ಅಪಾರ ಶಕ್ತಿಗಳನ್ನು ರಾಜ್ಯ ಚುನಾವಣೆಗಳಲ್ಲಿ ಕ್ರಮಬದ್ಧವಾಗಿ ಆರಿಸಿ ಬಂದ ವಿರೋಧ ಪಕ್ಷಗಳ ವಿರುದ್ಧ ಆಗಾಗ ಬಳಸಲಾಗಿದೆ. ರಾಜ್ಯಪಾಲರ ಅಧಿಕಾರಗಳನ್ನು ದುರುಪಯೋಗಪಡಿಸಿಕೊಂಡು ಆಳುವ ಪಕ್ಷದ ಅಲ್ಪ ಮತ ಸರಕಾರಗಳನ್ನು ಪ್ರತಿಷ್ಠಾಪಿಸಿ ಮತದಾರರ ತೀರ್ಪನ್ನು ನಿರುಪಯುಕ್ತಗೊಳಿಸಲಾಗಿದೆ.

ಹಾಗೇನೇ ರಾಜ್ಯ ವಿಧಾನ ಮಂಡಲಗಳು ಅಂಗೀಕರಿಸಿದ ಮಸೂದೆಗಳಿಗೆ ರಾಷ್ಟ್ರಪತಿಯ ಒಪ್ಪಿಗೆಯನ್ನು ತಡೆಹಿಡಿದು ಜನತೆಯ ಹಿತ ಕಾಪಾಡುವ ಪ್ರಗತಿಶೀಲ ಶಾಸನಗಳನ್ನು ಬುಡಮೇಲು ಮಾಡುವುದರಲ್ಲಿ ಕೇಂದ್ರ ಯಶಸ್ವಿಯಾಗಿದೆ. ಪಶ್ಚಿಮ ಬಂಗಾಳದ ಎಡರಂಗ ಸರಕಾರದ ಭೂ ಮಸೂದೆಯನ್ನು ಅಲ್ಲಿನ ವಿಧಾನ ಮಂಡಲ ಅಂಗೀಕರಿಸಿ ತಿಂಗಳುಗಳೇ ಕಳೆದು ಹೋಗಿದ್ದರೂ ಅದಕ್ಕಿನ್ನೂ ರಾಷ್ಟ್ರಪತಿಯ ಸಮ್ಮತಿ ದೊರೆತಿಲ್ಲ. ಕಾರ್ಮಿಕ ಸಂಘಗಳಿಗೆ ಗುಪ್ತ ಮತದಾನದ ಮೂಲಕ ಮಾನ್ಯತೆ ನೀಡುವ ಬಗ್ಗೆ ಹಿಂದಿನ ಎಡರಂಗ ಸರಕಾರ ಅಂಗೀಕರಿಸಿದ ಕ್ರಮವನ್ನು ಈ ವಿಧಾನವನ್ನು ಬಳಸಿಯೇ ಕೊಲೆ ಮಾಡಲಾಯಿತು. ಕೇರಳದ ಎಡ ಪ್ರಜಾಪ್ರಭುತ್ವ ರಂಗದ ಸರಕಾರ ಅಂಗೀಕರಿಸಿದ ಒಂದು ಕ್ರಮಕ್ಕೂ ಇದೇ ಗತಿಯಾಯಿತು.

ಸ್ವಾಯತ್ತತೆಯಿಂದ ಐಕ್ಯತೆ

ಇದರಿಂದಾಗಿ ಭಾರತದ ಐಕ್ಯತೆ ಮತ್ತು ಪ್ರಜಾಪ್ರಭುತ್ವದ ರಕ್ಷಣೆ, ಯೋಜಿತ ಆರ್ಥಿಕ ಬೆಳವಣಿಗೆಯ ಸಂಯೋಜನೆ ಮತ್ತು ಇತರ ಮೂಲಭೂತ ಕಾರ್ಯಭಾರಗಳನ್ನು ಸಾಧಿಸುವುದು ಇದೆಲ್ಲಾ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಚಟುವಟಿಕೆಗಳನ್ನು ಸಂಯೋಜಿಸುವ ರಾಜಕೀಯ ಪ್ರಕ್ರಿಯೆಯಿಲ್ಲದೆ ಸಾಧ್ಯವಿಲ್ಲ ಎಂಬುದು ಸ್ಪಷ್ಟ. ಆದ್ದರಿಂದಲೇ ನಮ್ಮ ಪಕ್ಷ ನಿಜವಾದ ಸಮಾನತೆ ಹಾಗೂ ರಾಜ್ಯಗಳಿಗೆ ಸ್ವಾಯತ್ತತೆ ಬೇಕೆನ್ನುತ್ತದೆ. ಈ ಸಮಾನತೆಯ ಭಾವನೆಯಿಲ್ಲದೆ ಹಾಗೂ ರಾಜ್ಯ ವಲಯದಲ್ಲಿ ಸ್ವಾಯತ್ತತೆಯಿಲ್ಲದೆ ಭಾರತದ ಐಕ್ಯತೆ ಬಲಶಾಲಿಯಾಗಲಾರದು ಹಾಗೂ ನಾವು ಒಂದು ಜನತೆ, ಒಂದು ದೇಶ ಎಂಬ ಭಾವನೆ ದುರ್ಬಲಗೊಳ್ಳುತ್ತಾ ಹೋಗುತ್ತದೆ. ವಿಚ್ಛಿದ್ರಕಾರೀ ಶಕ್ತಿಗಳ ಆಘಾತಗಳನ್ನು ಎದುರಿಸಲು ಬೇಕಾಗಿರುವುದು ಐಕ್ಯತೆಯ ಬಲವಾದ ಭಾವನೆ ಹಾಗೂ ಆಕಾಂಕ್ಷೆ. ರಾಜ್ಯಗಳ ಸ್ವಾಯತ್ತತೆ ಈ ಅವಶ್ಯಕತೆಯನ್ನು ಪೂರೈಸುವಲ್ಲಿ ಬಹಳಷ್ಟು ಸಹಾಯಕವಾಗುತ್ತದೆ. ತಮ್ಮನ್ನು ಚುನಾಯಿಸಿದ ಜನತೆಯ ಆಶಯ ಹಾಗೂ ತೀರ್ಪನ್ನು ಪೂರೈಸಲು ಸಾಕಷ್ಟು ಸ್ವಾತಂತ್ರ್ಯ ಹಾಗೂ ಅಧಿಕಾರಗಳು ರಾಜ್ಯ ವಿಧಾನ ಮಂಡಲಗಳು ಹಾಗೂ ಸರಕಾರಗಳಿಗೆ ಇರಲೇಬೇಕು. ಇದನ್ನು ನಿರಾಕರಿಸಿದರೆ ಒಕ್ಕೂಟದ ಘಟಕಗಳನ್ನು ಪರಾವಲಂಬನೆಯ ಮಟ್ಟಕ್ಕಿಳಿಸಿ ಭಾರತೀಯ ಪ್ರಜಾಪ್ರಭುತ್ವದ ಒಂದು ಕೈಯನ್ನು ಮುರಿದಂತಾಗುತ್ತದೆ.

> ಕೆಲವಾರು ಬೂರ್ಜ್ವಾ ವಿರೋಧ ಪಕ್ಷಗಳ ಸಮಯ ಸಾಧಕತೆ ಛಿದ್ರಕಾರೀ ಶಕ್ತಿಗಳಿಗೆ ನೆರವು ನೀಡುತ್ತಿದೆ. ಆದ್ದರಿಂದ ಈ ಸವಾಲನ್ನು ಎತ್ತಿಕೊಂಡು ರಾಷ್ಟ್ರೀಯ ಐಕ್ಯತೆಯ ಹೋರಾಟವನ್ನು, ದೇಶೀಯ ಗುಂಪುಗಳ ಸಮಾನತೆಯ ಹೋರಾಟದೊಂದಿಗೆ ಮೇಳವಿಸುವ ಜವಾಬ್ದಾರಿ ಎಡ ಪಕ್ಷಗಳ ಹೆಗಲ ಮೇಲೆ ಬಿದ್ದಿದೆ........ಕಾರ್ಮಿಕ ವರ್ಗ ಎಲ್ಲಾ ದೇಶೀಯ ಗುಂಪುಗಳ ಸಮಾನತೆ ಹಾಗೂ ಭಾರತದ ಐಕ್ಯತೆಯ ಅಚಲ ಹೋರಾಟಗಾರನಾಗಿ ಮುಂದೆ ಬರಬೇಕಾಗಿದೆ. ಈ ಪಾತ್ರವನ್ನು ನಿರ್ವಹಿಸಲು ಅನುಕೂಲವಾದ ಸ್ಥಾನದಲ್ಲಿ ಅದು ನಿಂತಿದೆ.

ಕೆಲವು ಸಲಹೆ–ಸೂಚನೆಗಳು

ಸಮಾನತೆಯ ಹಾಗೂ ಪಾಲುದಾರಿಕೆಯ ಒಂದು ಭಾವನೆಯನ್ನು ಸೃಷ್ಟಿಸುವ ವಿಚಾರದಲ್ಲಿ ಕೇಂದ್ರಗಳ ಅಧಿಕಾರಗಳನ್ನು ಕಡಿತಗೊಳಿಸಿ ರಾಜ್ಯಗಳ ಅಧಿಕಾರಗಳನ್ನು ಹೆಚ್ಚಿಸುವಂತೆ ಸಂವಿಧಾನಕ್ಕೆ ಹಲವಾರು ತಿದ್ದುಪಡಿಗಳನ್ನು ನಮ್ಮ ಪಕ್ಷ ಸೂಚಿಸಿದೆ.

ಶ್ರೀನಗರ ಸಮ್ಮೇಳನ ಇಂತಹುದೇ ಶಿಫಾರಸುಗಳನ್ನು ಮಾಡಿದೆ. ರಾಜ್ಯಪಾಲರ ಹುದ್ದೆಯನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ. ಹೆಚ್ಚಿನ ಸಂದರ್ಭಗಳಲ್ಲಿ ರಾಜ್ಯಪಾಲರುಗಳು ಕೇಂದ್ರ ಆಳುವ ಪಕ್ಷದ ಹಿತಾಸಕ್ತಿ ಸಾಧಿಸುವ ರೀತಿಯಲ್ಲಿ ತಮ್ಮ ಹುದ್ದೆಯನ್ನು ಬಳಸಿಕೊಂಡಿದ್ದಾರೆ ಎನ್ನುವುದು ದಾಖಲೆಗಳಿಂದ ಸಿದ್ಧವಾಗುತ್ತದೆ. ಇದರಲ್ಲಿ ಸಂಶಯಕ್ಕೆ ಏನೇನೂ ಆಸ್ಪದವಿಲ್ಲ.... ನಮ್ಮ ವಿಚಾರದಲ್ಲಿ ರಾಜ್ಯಪಾಲರುಗಳ ಸ್ಥಾನ ರಾಷ್ಟ್ರಪತಿಗಳ ಸ್ಥಾನಕ್ಕಿಂತ ಯಾವ ರೀತಿಯಲ್ಲೂ ಭಿನ್ನವಾಗಿರಬಾರದು. ಸಂಬಂಧಪಟ್ಟ ರಾಜ್ಯ ಸರಕಾರ ಕಳಿಸುವ ಹೆಸರುಗಳ ಪಟ್ಟಿಯ ಆಧಾರದ ಮೇಲೆ ರಾಷ್ಟ್ರಪತಿಗಳು ರಾಜ್ಯಪಾಲರನ್ನು ನೇಮಿಸಬೇಕು ಎಂದು ನಾವು ಸೂಚಿಸುತ್ತೇವೆ." —ಎಂದಿದೆ ಈ ಸಮ್ಮೇಳನ. ರಾಷ್ಟ್ರಪತಿಗಳಿಗೆ ರಾಜ್ಯ ಸರಕಾರಗಳನ್ನು ಅಥವಾ ವಿಧಾನ ಸಭೆಯನ್ನು ವಿಸರ್ಜಿಸುವ ಅಧಿಕಾರ ನೀಡುವ ಸಂವಿಧಾನದ 356—357 ನೇ ಕಲಮುಗಳಿಗೆ ಸೂಕ್ತವಾಗಿ ತಿದ್ದುಪಡಿ ತರಬೇಕು" ಎಂದು ಆ ಸಮ್ಮೇಳನ ಒತ್ತಾಯಿಸಿತು. ಕೇಂದ್ರ ಸರಕಾರಕ್ಕಿರುವ ತೆರಿಗೆ ಮೂಲಗಳನ್ನು ಕಡಿಮೆ ಮಾಡಬೇಕು ಮತ್ತು ಇತರ ಬದಲಾವಣೆಗಳನ್ನು ತರಬೇಕು ಎಂಬ ಬೇಡಿಕೆಗಳನ್ನು ಸಮ್ಮೇಳನ ಮುಂದಿಟ್ಟಿತು ಈಗಿನ ಆರ್ಥಿಕ ಅಸಮತೋಲನ ಹಾಗೂ ರಾಜ್ಯಗಳಿಗಾಗುತ್ತಿರುವ ವಂಚನೆಗಳು ಆರ್ಥಿಕ ಅಧಿಕಾರಗಳು ಹಾಗೂ ಸಂಪನ್ಮೂಲಗಳ ವಿಪರೀತ ಕೇಂದ್ರೀಕರಣದ ಪರಿಣಾಮಗಳು ಎಂದು ಸಮ್ಮೇಳನ ಅಭಿಪ್ರಾಯಪಟ್ಟಿತು. ರಾಜ್ಯಗಳಿಗೆ ಯೋಗ್ಯ ಪ್ರಾತಿನಿಧ್ಯ ಕೊಡಲು ಸಾಧ್ಯವಾಗುವಂತೆ ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಹಾಗೂ ಯೋಜನಾ ಆಯೋಗವನ್ನು ಪುನರ್ರಚಿಸಬೇಕೆಂದೂ ಸಮ್ಮೇಳನ ಒತ್ತಾಯಿಸಿತು. ನಮ್ಮ ಪಕ್ಷದ ದಸ್ತಾವೇಜುಗಳಲ್ಲಿ ಶ್ರೀನಗರ ಸಮ್ಮೇಳನ ಸೂಚಿಸಿದ ತಿದ್ದುಪಡಿಗಳ ಒಟ್ಟು ಪರಿಣಾಮವೇನೆಂದರೆ ತನ್ನ ಜವಾಬ್ದಾರಿಗಳನ್ನು ನಿಭಾಯಿಸುವ ಕೇಂದ್ರದ ಶಕ್ತಿಯನ್ನು ಕುಂದಿಸದೆ ಭಾರತ ಸಂಘದ ರಾಜ್ಯಗಳಿಗೆ ನಿಜವಾದ ಸ್ವಾಯತ್ತತೆಯನ್ನು ಸಿಗುವಂತೆ ಮಾಡುವುದು. ಅದು ಕೇಂದ್ರ ಹಾಗೂ ರಾಜ್ಯಗಳ ಸಂಬಂಧಗಳಲ್ಲಿ ಪ್ರಜಾಪ್ರಭುತ್ವವನ್ನು ಮತ್ತೆ ತಂದು ಕೇಂದ್ರದ ಸರ್ವಾಧಿಕಾರೀ ಆಚರಣೆಗಳನ್ನು ಕೊನೆಗೊಳಿಸುತ್ತವೆ.

ಅನುಭವ ರೂಪಿಸಿದ ಕಾರ್ಯಕ್ರಮ

ಸಂವಿಧಾನಕ್ಕೆ ಈ ತಿದ್ದುಪಡಿಗಳನ್ನು ತರುವುದಕ್ಕೆ ಬೆಂಬಲವಾಗಿ ಸಾರ್ವಜನಿಕ ಅಭಿಪ್ರಾಯವನ್ನು ಜಾಗೃತಗೊಳಿಸುವುದು ಅತ್ಯಂತ ಅಗತ್ಯ ವಿಚಾರಸಂಕಿರಣಗಳು ಹಾಗೂ ಸಂಸದೀಯ ವಾದ - ವಿವಾದಗಳಿಂದಲೇ ಯಶಸ್ಸು ಸಾಧಿಸಲು ಸಾಧ್ಯವಾಗದು. ಪ್ರಜಾಪ್ರಭುತ್ವಕ್ಕಾಗಿ ಅಧಿಕಾರಗಳನ್ನು ಒಂದೇ ಕಡೆ ಒಟ್ಟುಗೂಡಿಸುವುದರ ವಿರುದ್ಧ ಹೋರಾಟದಲ್ಲಿ ಭಾಗವಹಿಸುವಂತೆ ಜನಸಮೂಹಕ್ಕೆ ಕರೆ ನೀಡಬೇಕಾಗುತ್ತದೆ. ಬೂರ್ಜ್ವಾ - ಭೂಮಾಲಕ ವರ್ಗಗಳು ರಾಷ್ಟ್ರದ ಐಕ್ಯತೆ ಹಾಗೂ ಸಮಗ್ರತೆಯನ್ನು ಒಡೆಯಬೇಕೇ ಅಥವಾ ಜನತೆಯ ನೇತೃತ್ವ ವಹಿಸುವ ಕಾರ್ಮಿಕ ವರ್ಗ ವಿಚ್ಛಿದ್ರಕಾರಿಗಳನ್ನು ಸೋಲಿಸಿ ಭಾರತ ಸಂಘದ ಪರಸ್ಪರ ಬಂಧನಗಳನ್ನು ಬಲಗೊಳಿಸಬೇಕೇ ಎಂಬುದನ್ನು ನಿರ್ಧರಿಸಬೇಕಾದ ಹೋರಾಟವಿದು ಇಲ್ಲಿ ಇನ್ನೊಮ್ಮೆ ಲೆನಿನ್ ಈ ಬಗ್ಗೆ ಏನು ಹೇಳಿದ್ದಾರೆಂಬುದನ್ನು ಗಮನಿಸಬೇಕು. ರಷ್ಯಾದಲ್ಲಿ ಬೋಲ್ಷೆವಿಕರು ತಮ್ಮ ದೇಶೀಯ ಕಾರ್ಯಕ್ರಮವನ್ನು ಹೇಗೆ ರೂಪಿಸಿದರು ?— "ಆದರೆ ಅದೇ ವೇಳೆಗೆ ದೇಶೀಯ ಗುಂಪುಗಳ ನಡುವೆ ಪ್ರತಿಯೊಂದು ರೀತಿಯ ದೇಶೀವಾದಗಳ ವಿರುದ್ಧ ಒಂದು ಯಶಸ್ವೀ ಹೋರಾಟ ನಡೆಸಲಿಕ್ಕಾಗಿ ಶ್ರಮಿಕ ವರ್ಗದ ಹೋರಾಟ ಹಾಗೂ ಶ್ರಮಿಕ ಸಂಘಟನೆಗಳ ಐಕ್ಯತೆಯನ್ನು ಕಾಯ್ದುಕೊಳ್ಳುವುದು ಅದರ ಕರ್ತವ್ಯವಾಗುತ್ತದೆ. ರಾಷ್ಟ್ರೀಯ ಪ್ರತ್ಯೇಕ ಭಾವಕ್ಕಾಗಿ ಬೂರ್ಜ್ವಾಗಳು ನಡೆಸುತ್ತಿರುವ ಪ್ರಯತ್ನಗಳನ್ನೂ ಮೀರಿನಿಂತು ಈ ಸಂಘಟನೆಗಳನ್ನು ಒಂದುಗೂಡಿಸಿ ಪರಸ್ಪರ ಚೆನ್ನಾಗಿ ಬೆಸೆದುಕೊಂಡ ಒಂದು ಅಂತರ್ದೇಶೀಯ ಸಂಘಟನೆಯಾಗಿ ಮಾಡಬೇಕಾಗುತ್ತದೆ.

"ಎಲ್ಲಾ ದೇಶಗಳಿಗೆ ಸಂಪೂರ್ಣ ಸಮಾನತೆಯ ಹಕ್ಕುಗಳು, ದೇಶಗಳಿಗೆ ಸ್ವಯಂ—ನಿರ್ಧಾರದ ಹಕ್ಕು, ಎಲ್ಲಾ ದೇಶಗಳ ಕಾರ್ಮಿಕರ ಐಕ್ಯತೆ—ಮಾರ್ಕ್ಸ್‌ವಾದ, ಸಮಸ್ತ ಜಗತ್ತಿನ ಅನುಭವ ಹಾಗೂ ರಶ್ಯಾದ ಅನುಭವ ಕಾರ್ಮಿಕರಿಗೆ ಕಲಿಸುವ ದೇಶೀಯ ಕಾರ್ಯಕ್ರಮ ಹೀಗಿದೆ." [Collected Works]

ನಮ್ಮ ಪರಿಸರದಲ್ಲಿ

ಭಾರತದ ಪರಿಸ್ಥಿತಿಯಲ್ಲಿ ಸ್ವಯಂ ನಿರ್ಧಾರದ ಬೇಡಿಕೆ ಹಾಗೂ ಪ್ರತ್ಯೇಕ

(6ನೇ ಪುಟ ನೋಡಿ)

ಬುಡಕಟ್ಟು ಜನಾಂಗ ಪ್ರಶ್ನೆ ಮತ್ತು ಎಡರಂಗ ಸರಕಾರ

[3ನೇ ಪುಟದಿಂದ]

22,000 ಬುಡಕಟ್ಟು ಹುಡುಗರು ಮತ್ತು ಹುಡುಗಿಯರು ವಿವಿಧ ಕಸುಬುಗಳಲ್ಲಿ ಈಗ ತರಬೇತಿ ಪಡೆದಿದ್ದಾರೆ. ತಿಕ್ಷಣದ ನಂತರ ಉದ್ಯೋಗದ ಪ್ರಶ್ನೆ ಬರುತ್ತದೆ. ಇಲ್ಲೂ 24./. ಮೀಸಲಾತಿಯ ನಿಯಮವನ್ನು ಚಾಚೂ ತಪ್ಪದೆ ಪಾಲಿಸಲಾಗುತ್ತಿದೆ. ಪೋಲೀಸ್ ಇಲಾಖೆಯಲ್ಲಿ ಬುಡಕಟ್ಟು ಜನರ ಭರ್ತಿಯ ಪ್ರಮಾಣ ಇನ್ನೂ ಹೆಚ್ಚಿದೆ. ಯಾಕೆಂದರೆ ಹಿಂದೆ ಈ ರೀತಿ ಭರ್ತಿ ನಡೆಯದೆ ಬಹಳಷ್ಟು ಬಾಕಿ ಉಳಿದಿದ್ದನ್ನೂ ಈಗ ಭರ್ತಿ ಮಾಡಲಾಗುತ್ತಿದೆ. ಕಳೆದ ಆರು ವರ್ಷಗಳಲ್ಲಿ ಕನಿಷ್ಟ 15 ಸಾವಿರ ಬುಡಕಟ್ಟು ಜನರು ಉದ್ಯೋಗ ಪಡೆದಿದ್ದಾರೆ.

ವಿಶಿಷ್ಟ ಪ್ರಯೋಗ

ಎಡರಂಗ ಸರಕಾರದ ಅತ್ಯಂತ ಮಹತ್ತ್ವಪೂರ್ಣ ಸಾಧನೆಯೆಂದರೆ ಬುಡಕಟ್ಟು ಸ್ವಾಯತ್ತ ಜಿಲ್ಲಾ ಸಮಿತಿಯ ರಚನೆ. ಇಂತಹ ಒಂದು ಸಂಸ್ಥೆಯ ರಚನೆಗೆ ಸಂವಿಧಾನದ ಆರನೇ ಅನುಬಂಧದ ಪ್ರಕಾರ ಮಾತ್ರ ಅವಕಾಶ. ಆದರೆ ಈ ಅನುಬಂಧ ಆಗಿನ ಅಸ್ಸಾಂಗೆ ಮಾತ್ರ ಸಂಬಂಧಪಟ್ಟಿದ್ದುದರಿಂದ ಅದಕ್ಕೆ ಸಂವಿಧಾನದ ತಿದ್ದುಪಡಿ ಅಗತ್ಯವಿತ್ತು. ಇದಕ್ಕೆ ಇತ್ತೀಚಿನವರೆಗೆ ಕೇಂದ್ರ ಸರಕಾರ ಸಿದ್ಧವಿರಲಿಲ್ಲ. (ಇತ್ತೀಚೆಗಷ್ಟೇ ಸಂಸತ್ತು ಈ ತಿದ್ದುಪಡಿ ಅಂಗೀಕರಿಸಿದ್ದು.) ಆದ್ದರಿಂದ ಎಡರಂಗ ಸರಕಾರ ತಾನೇ ಇಂತಹ ಸಮಿತಿಯೊಂದರ ರಚನೆಗೆ ಅನುಕೂಲವಾಗುವಂತೆ ಒಂದು ಮಸೂದೆ ವಿಧಾನ ಸಭೆಯ ಅಂಗೀಕಾರ ಪಡೆಯಿತು. ಬುಡಕಟ್ಟುಗಳಿಗೆ ಸೇರದ 41 ಸದಸ್ಯರಿದ್ದ ಒಂದು ವಿಧಾನಸಭೆ ಇದನ್ನು ಅವಿರೋಧವಾಗಿ ಅಂಗೀಕರಿಸಿದ್ದು ನಿಜವಾಗಿಯೂ ವಿಶಿಷ್ಟ ಸಂಗತಿ. 1980 ರ ಗಲಭೆಗಳ ನಂತರ ಶಾಂತಿಯುತವಾಗಿ ರಾಜ್ಯದ ಮೂರರಲ್ಲಿ ಎರಡರಷ್ಟು ಪ್ರದೇಶವನ್ನೂ, ಮೂರರಲ್ಲಿ ಒಂದರಷ್ಟು ಜನಸಂಖ್ಯೆಯನ್ನೂ ಆವರಿಸಿರುವ ಈ ಸಮಿತಿಗೆ ಚುನಾವಣೆಗಳು ನಡೆದವು. ಕಾಂಗ್ರೆಸ್ (ಐ) ಹಾಗೂ ಅಮ್ರಬಂಗಾಲಿ ಇದನ್ನು ಬಹಿಷ್ಕರಿಸಿದ್ದರೂ 74 ಶೇಕಡಾ ಬುಡಕಟ್ಟು ಜನ ಹಾಗೂ ಇತರರು ಮತದಾನ ಮಾಡಿದರು. ಎಡರಂಗ 28 ರಲ್ಲಿ 21 ಸ್ಥಾನಗಳನ್ನು ಗಳಿಸಿತು.

ಈ ಸಮಿತಿಗೆ ಕಾರ್ಯಕಾರೀ ಸದಸ್ಯರು ಮತ್ತು ಒಬ್ಬ ಅಧ್ಯಕ್ಷನಿದ್ದು ಮಂತ್ರಿಮಂಡಲದ ಮಾದರಿಯಲ್ಲಿ ಇದು ಕೆಲಸ ಮಾಡುತ್ತದೆ. ತನ್ನದೇ ಆದ ಸಂಪನ್ಮೂಲಗಳು ಸೀಮಿತವಾಗಿದ್ದರೂ ವಿವಿಧ ಅಭಿವೃದ್ಧಿ ಇಲಾಖೆಗಳ ಯೋಜನಾ ಹಣ, ಜತೆಗೆ ಬುಡಕಟ್ಟು ಉಪಯೋಜನೆ ಮತ್ತು ಕೇಂದ್ರೀಯ ಯೋಜನೆಗಳ ಪ್ರಕಾರ ದೊರೆಯುವ ಹಣವನ್ನು ಈ ಸ್ವಾಯತ್ತ ಜಿಲ್ಲಾ ಸಮಿತಿಗೆ ಒಪ್ಪಿಸಲಾಗಿದೆ. 1984-85 ರ ಸಾಲಿಗೆ ಅದು 16 ಕೋಟಿ ರೂ.ಗಳ ಬಜೆಟ್‌ನೊಂದಿಗೆ ಆರಂಭಿಸಿದೆ. ಮೂರು ಬುಡಕಟ್ಟು ಬ್ಲಾಕ್‌ಗಳಲ್ಲಿ ಗ್ರಾಮ ಮಟ್ಟದ ಎಲ್ಲಾ ಕಾರ್ಯಗಳನ್ನು, ಅಂದರೆ ಪ್ರಾಥಮಿಕ ಶಾಲೆಗಳು, ಪಶುಪಾಲನೆ, ಮೀನುಗಾರಿಕೆ, ಗ್ರಾಮ ಕೈಗಾರಿಕೆ, ಅರಣ್ಯಗಾರಿಕೆ ಮುಂತಾದವುಗಳನ್ನು ಈ ಸಮಿತಿಗೇ ಒಪ್ಪಿಸಿರುವುದರಿಂದ ಈ ಈ ಬಜೆಟ್ ಮೊತ್ತ ಇನ್ನೂ ಹೆಚ್ಚಲಿದೆ.

ಸಮತೋಲನ ಮತ್ತು ಐಕ್ಯತೆ

ತ್ರಿಪುರಾದ ಬುಡಕಟ್ಟು ಜನತೆ ಮತ್ತು ಇತರರ ನಡುವೆ ಶಾಶ್ವತ ಐಕ್ಯತೆಯನ್ನು ಸಾಧಿಸುವುದರಲ್ಲಿ ಇದು ಮಹತ್ತ್ವಪೂರ್ಣ ಪಾತ್ರ ವಹಿಸಿದೆ. ಅದು ಕೈಗೆತ್ತಿಕೊಂಡ ಇನ್ನೊಂದು ಮಹತ್ತ್ವಪೂರ್ಣ ಕೆಲಸವೆಂದರೆ ಜಮೀನು ಮಂಜೂರಾತಿಯ ಕೆಲಸ. ಬುಡಕಟ್ಟು ಗುಂಪುಗಳಿಗೆ ಸೇರದ ಯಾರೂ ಇನ್ನು ಮುಂದೆ ಈ ಕ್ಷೇತ್ರಗಳಲ್ಲಿ ಜಮೀನು ಪಡೆಯಲು ಸಾಧ್ಯವಾಗದು.

ಕಾಂಗ್ರೆಸ್ ಆಳ್ವಿಕೆಯಲ್ಲಿ ಅಭಿವೃದ್ಧಿಯಲ್ಲಿ ಎಷ್ಟೊಂದು ಅಸಮಾನತೆಯಿತ್ತೆಂದರೆ ಎಲ್ಲಾ ಕಚೇರಿಗಳು, ಶಾಲೆಗಳು, ಆರೋಗ್ಯ ಕೇಂದ್ರಗಳು, ಪೋಲೀಸ್ ಠಾಣೆಗಳು ಸ್ಥಾಪನೆಗೊಂಡದ್ದು ಕೇವಲ ಇತರ ಜನರು ವಾಸಿಸುವ ಪ್ರದೇಶಗಳಲ್ಲಷ್ಟೇ. ಅತ್ಯಂತ ಕಮ್ಮಿ ಅವಧಿಯಲ್ಲಿ ಈ ಅಸಮತೋಲನವನ್ನು ನಿವಾರಿಸುವ ಕೆಲಸವನ್ನು ಸ್ವಾಯತ್ತ ಜಿಲ್ಲಾ ಸಮಿತಿ ಕೈಗೆತ್ತಿಕೊಂಡಿದೆ. ಇದರಿಂದಾಗಿ ಇದುವರೆಗೆ ಯಾವ ಸಂಪರ್ಕವನ್ನೂ ಪಡೆಯದಿದ್ದ ಪ್ರದೇಶಗಳಲ್ಲೂ ಅಭಿವೃದ್ಧಿ ಕೇಂದ್ರಗಳು ಬೆಳೆದು ಬರುತ್ತಿವೆ. 1980 ರ ಗಲಭೆಗಳಲ್ಲಿ ಸಾಮೂಹಿಕ ಕೊಲೆಗಳು ನಡೆದ ಮಂಡ್ಯಾ ಈಗ ಬುಡಕಟ್ಟು ಜನರು ಹಾಗೂ ಬಂಗಾಲಿಗಳು ಹೊಂದಿಕೊಂಡು ಜೀವಿಸುತ್ತಿರುವ "ಮಿನಿ ಪಟ್ಟಣ"ವಾಗಿ ಬೆಳೆದಿದೆ. ಸ್ವಾಯತ್ತ ಜಿಲ್ಲಾ ಸಮಿತಿ ಕೈಗಾರಿಕಾ ಅಭಿವೃದ್ಧಿ ಕೆಲಸದಲ್ಲಿ ಮುಂದೆ ಇನ್ನೂ ದೊಡ್ಡ ಪಾತ್ರ ವಹಿಸಲಿರುವುದನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಐದು ವರ್ಷಗಳಿಗೆ 30 ಕೋಟಿ ರೂ. ಗಳನ್ನು ರಾಜ್ಯ ಸರಕಾರ ಕೇಳಿತ್ತು. ಆದರೆ ಎಂಟನೇ ಹಣಕಾಸು ಆಯೋಗ ಇದನ್ನು 80 ಲಕ್ಷ ರೂ.ಗೆ ಇಳಿಸಿದೆ.

ರಾಜಕೀಯ ಪರಿಹಾರ

ಸ್ವಾಯತ್ತ ಜಿಲ್ಲಾ ಸಮಿತಿ ಹಾಗೂ ರಾಜ್ಯ ಸರಕಾರದ ಈ ವ್ಯಾಪಕ ಅಭಿವೃದ್ಧಿ ಚಟುವಟಿಕೆಗಳ ಪ್ರಭಾವ ಈಗ ತೀವ್ರವಾದಿಗಳ ಮೇಲೂ ಬೀಳುತ್ತಿದೆ. ಬಾಂಗ್ಲಾ ದೇಶದಲ್ಲಿ "ಸ್ವತಂತ್ರ ಬುಡಕಟ್ಟು ಸರಕಾರ" ಸ್ಥಾಪಿಸಿದ್ದ ಬಿನಂದಾ ಜಮಾತಿಯಾ ಹಾಗೂ ಆತನ 280 ಅನುಯಾಯಿಗಳು ಎಡರಂಗ ಸರಕಾರದ ಕರೆಗೆ ಓಗೊಟ್ಟು ತಮ್ಮ "ಸರಕಾರ" ವನ್ನು ವಿಸರ್ಜಿಸಿ ಸರಕಾರಕ್ಕೆ ಶರಣಾಗಿದ್ದಾರೆ. ಅವರೀಗ ಪ್ರಜಾಪ್ರಭುತ್ವವಾದೀ ಚಳುವಳಿಯನ್ನು ಸೇರಿಕೊಂಡು ಪ್ರತ್ಯೇಕತಾವಾದಿಗಳನ್ನು ಖಂಡಿಸಲಾರಂಭಿಸಿದ್ದಾರೆ. ಸ್ವಾಯತ್ತ ಜಿಲ್ಲಾ ಸಮಿತಿಯ ಏಳು ಟಿ.ಯು.ಜೆ.ಎಸ್. ಸದಸ್ಯರಲ್ಲಿ ಐವರು ಟಿಯುಜೆಎಸ್ ತ್ಯಜಿಸಿ ಬಂದಿದ್ದಾರೆ. ಅವರಲ್ಲಿ ಒಬ್ಬಾತ ಎಡರಂಗ ಸೇರಿದ್ದರೆ, ಉಳಿದವರು ತ್ರಿಪುರಾ ಗುಡ್ಡಗಾಡು ಜನತೆಯ ಪಕ್ಷ ರಚಿಸಿ ಎಡರಂಗ ಸರಕಾರದೊಡನೆ ಸಹಕರಿಸುತ್ತಿದ್ದಾರೆ. ಬುಡಕಟ್ಟು ತೀವ್ರಗಾಮಿಗಳ ಸಮಸ್ಯೆ ಒಂದು ರಾಜಕೀಯ ಸಮಸ್ಯೆ; ಅದನ್ನು ಪೋಲೀಸ್ ಅಥವಾ ಸಶಸ್ತ್ರ ಪಡೆಗಳಿಗೆ ಬಿಟ್ಟು ಕೊಟ್ಟರೆ ಸಮಸ್ಯೆ ಪರಿಹಾರವಾಗುವ ಬದಲು ಉಲ್ಬಣಗೊಳ್ಳುತ್ತದೆ ಎಂಬ ಎಡರಂಗದ ನಿಲುವಿನ ಸತ್ಯತೆಗೆ ಇದೊಂದು ನಿದರ್ಶನ. ●

ಕುಂದಾಪುರ ತಾಲೂಕು ಕೂಲಿ ಕೆಲಸಗಾರರ ಸಂಘ ಸ್ಥಾಪನೆ

ಕುಂದಾಪುರ ತಾಲೂಕು ದಿನಕೂಲಿ ಕಾರ್ಮಿಕರ ಸಭೆಯು ದಿನಾಂಕ 23-9-84 ರಂದು ನಗರಸಭಾ ಸದಸ್ಯರಾದ ವಿ. ಆನಂದರವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಅಬ್ರಹಾಂಕರ್ಕಡರವರು ಕೂಲಿ ಕೆಲಸಗಾರರು ಸಂಘಟಿತರಾಗಿ ತಮ್ಮ ನ್ಯಾಯವಾದ ಬೇಡಿಕೆಯಾದ ಕೂಲಿ ಹೆಚ್ಚಳವನ್ನು ಪಡೆಯಲು ಹೋರಾಟಕ್ಕೆ ಮುಂದಾಗಬೇಕೆಂದು ಕರೆ ಇತ್ತರು.

ಸಭೆಯಲ್ಲಿ ಕಾರ್ಯಕಾರೀಸಮಿತಿಯನ್ನು ಈ ಕೆಳಗಿನಂತೆ ಆಯ್ಕೆ ಮಾಡಲಾಯಿತು. ವಿ. ಆನಂದ (ಅಧ್ಯಕ್ಷ), ಜೋಗಿ (ಉಪಾಧ್ಯಕ್ಷ), ವಿ. ಪಾಂಡು (ಕಾರ್ಯದರ್ಶಿ), ಕೃಷ್ಣ ನಾಯರ್ (ಜೊತೆ ಕಾರ್ಯದರ್ಶಿ), ವಿ. ಆನಂದ [ಕೋಶಾಧಿಕಾರಿ], ವಿ. ಬಸವ, ಶಂಕರ, ಲಿಂಗಮುದ್ದುಗುಡ್ಡೆ [ಸದಸ್ಯರು]

ನೂತನ ಕಾರ್ಯದರ್ಶಿ ವಿ. ಪಾಂಡುರವರು ಪ್ರಾರಂಭದಲ್ಲಿ ಪ್ರಾಸ್ತಾವಿಕ ಭಾಷಣ ಮಾಡಿ, ಕೊನೆಯಲ್ಲಿ ಸಭೆಗೆ ವಂದಿಸಿದರು.

ಭಾರತದಲ್ಲಿ ದೇಶೀಯತೆಯ ಪ್ರಶ್ನೆ

(5ನೇ ಪುಟದಿಂದ)

ಗೊಳ್ಳುವ ಹಕ್ಕನ್ನು ಎತ್ತಲಾಗುವುದಿಲ್ಲ. ಅದಕ್ಕೆ ಕಾರಣಗಳನ್ನು ಪಕ್ಷದ ಮದುರೈ ಸಮ್ಮೇಳನದಲ್ಲಿ ಪೂರ್ಣವಾಗಿ ಚರ್ಚಿಸಲಾಗಿತ್ತು. ಅದರ ಸ್ಥಾನದಲ್ಲಿ ಎಲ್ಲಾ ಭಾಷೆಗಳ ಸಮಾನತೆ, ರಾಜ್ಯಗಳ ಸಮಾನ ಪಾಲುದಾರಿಕೆ, ರಾಜ್ಯ ಸ್ವಾಯತ್ತತೆ, ರಾಜ್ಯಗಳಿಗೆ ಮಿಗಿತೆಯ ಅಧಿಕಾರಗಳು ಹಾಗೂ ಮೇಲೆ ಸೂಚಿಸಿದ ತಿದ್ದುಪಡಿಗಳ ಬೇಡಿಕೆಯನ್ನು ಇಡಲಾಗಿದೆ.

ಲೆನಿನ್ನರ ದೇಶೀಯ ಕಾರ್ಯಕ್ರಮದ ಇತರ ಎರಡು ಅಂಶಗಳು ಪೂರ್ಣವಾಗಿ ಸವಂಜಸವಾಗಿವೆ. ಅವೆಂದರೆ—ದೊಡ್ಡ ಹಾಗೂ ಸಣ್ಣ ದೇಶಗಳ ಬೂರ್ಜ್ವಾ ವರ್ಗದ ವಿರುದ್ಧ ಹೋರಾಟ (ಭಾರತದ ಪರಿಸ್ಥಿತಿ ಕೇಂದ್ರದ ಪ್ರಾಬಲ್ಯವನ್ನು ಬೆಂಬಲಿಸುವವರ ಹಾಗೂ ಅದನ್ನು ಸಂಕುಚಿತ ದೃಷ್ಟಿಯಿಂದ ವಿರೋಧಿಸುವವರ ಸಂಕುಚಿತವಾದದ ವಿರುದ್ಧ ಹೋರಾಟ) ಮತ್ತು ಕಾರ್ಮಿಕ ವರ್ಗದ ಅಖಿಲ ಭಾರತ ಐಕ್ಯತೆ. ಕಾರ್ಮಿಕ ವರ್ಗದ ಹಾಗೂ ಅದರ ಆಂದೋಲನದ ಅಖಿಲ ಭಾರತೀಯ ಐಕ್ಯತೆಯನ್ನು ಬಲಗೊಳಿಸಿ ಅದನ್ನು ರಾಷ್ಟ್ರದ ಐಕ್ಯತೆಯನ್ನು ಛಿದ್ರಗೊಳಿಸುವ ಎಲ್ಲಾ ರೀತಿಯ ಸಂಕುಚಿತವಾದೀ ಪ್ರವೃತ್ತಿಗಳನ್ನು ತಡೆಯುವ, ಅವುಗಳ ವಿರುದ್ಧ ಹೋರಾಡುವ ಉಪಕರಣವನ್ನಾಗಿ ಮಾಡಬೇಕು.

ದೇಶೀಯ ಸಮಸ್ಯೆಯನ್ನು ಪರಿಹರಿಸಿ ರಾಷ್ಟ್ರದ ವಿಘಟನೆಯನ್ನು ತಡೆಯುವುದು ಸಮಸ್ತ ಭಾರತೀಯ ಜನತೆಯ ಕರ್ತವ್ಯ. ಭಾರತದ ಪ್ರಜಾಪ್ರಭುತ್ವ ಚಳುವಳಿ ರಾಷ್ಟ್ರದ ಐಕ್ಯತೆಯನ್ನು ಕಾಯ್ದುಕೊಳ್ಳಲು ಬದ್ಧವಾಗಿದೆ. ಆದರೆ ಈ ಆಂದೋಲನದ ದೊಡ್ಡ ವಿಭಾಗಗಳಿಗೆ ಈ ಸಮಸ್ಯೆಯ ಎಲ್ಲಾ ಭಾಷೆಗಳಿಗೆ ಸಮಾನತೆ ಪಡೆಯುವ, ರಾಜ್ಯಗಳಿಗೆ ಸಮಾನ ಪಾಲುದಾರಿಕೆಯ ಭಾವನೆಯ ಹಾಗೂ ಕೇಂದ್ರ—ರಾಜ್ಯ ಸಂಬಂಧಗಳಲ್ಲಿ ತಕ್ಷಣದ ಬದಲಾವಣೆಗಳ ಮಹತ್ವ ಇನ್ನೂ ಅರ್ಥವಾಗಿಲ್ಲ.

ಎಡ ಪಕ್ಷಗಳೇ ಹೊಣೆ ಹೊರಬೇಕು

ಇಂತಹ ಒಂದು ಸರಿಯಾದ ಹಾಗೂ ಸರ್ವಸಾಮಾನ್ಯ ತಿಳುವಳಿಕೆಯಿಲ್ಲದುದರಿಂದಾಗಿ ಅಸಮಾನ ನಡವಳಿಕೆಯ ಪರಿಣಾಮವಾಗಿ ಹುಟ್ಟಿಕೊಂಡ ಅಸಂತೃಪ್ತಿಯನ್ನು ಪ್ರತ್ಯೇಕತಾವಾದಿ, ವಿಚ್ಛಿದ್ರಕಾರಿ ಮತ್ತು ಪ್ರಾದೇಶಿಕತೆಯ ಮಾರ್ಗದತ್ತ ತಿರುಗಿಸಲಾಗುತ್ತಿದೆ; ಜನ ಸಾಮಾನ್ಯರ ಸೌಹಾರ್ದತೆಯನ್ನು ಮುರಿಯಲಾಗುತ್ತಿದೆ. ಹಾಗೂ ಪ್ರಜಾಪ್ರಭುತ್ವ ಹೋರಾಟವನ್ನು ಛಿದ್ರಗೊಳಿಸಲಾಗುತ್ತಿದೆ.

ಕೆಲವಾರು ಬೂರ್ಜ್ವಾ ವಿರೋಧ ಪಕ್ಷಗಳ ಸಮಯ ಸಾಧಕತೆ ಛಿದ್ರಕಾರೀ ಶಕ್ತಿಗಳಿಗೆ ನೆರವು ನೀಡುತ್ತಿದೆ. ಆದ್ದರಿಂದ ಈ ಸವಾಲನ್ನು ಎತ್ತಿಕೊಂಡು ರಾಷ್ಟ್ರೀಯ ಐಕ್ಯತೆಯ ಹೋರಾಟವನ್ನು, ದೇಶೀಯ ಗುಂಪುಗಳ ಸಮಾನತೆಯ ಹೋರಾಟದೊಂದಿಗೆ ಮೇಳವಿಸುವ ಜವಾಬ್ದಾರಿ ಎಡ ಪಕ್ಷಗಳ ಹೆಗಲ ಮೇಲೆ ಬಿದ್ದಿದೆ. ಎಡಪಕ್ಷಗಳು ಈ ಹೋರಾಟವನ್ನು ಜನಸಮೂಹದವರೆಗೆ ಕೊಂಡೊಯ್ಯಬೇಕಾಗಿದೆ. ಅದನ್ನು ಭಾಷೆಗಳ ಸಮಾನತೆಯ, ರಾಜ್ಯಗಳ ಸ್ವಾಯತ್ತತೆಗೆ ಅವಕಾಶವಾಗುವಂತೆ ಕೇಂದ್ರ-ರಾಜ್ಯ ಸಂಬಂಧಗಳಲ್ಲಿ ತಕ್ಷಣದ ಬದಲಾವಣೆ ತರಬೇಕೆಂಬ ಬೇಡಿಕೆಯೊಂದಿಗೆ ಆರಂಭಿಸಬೇಕಾಗಿದೆ.

ನಿರ್ಣಾಯಕ ಪಾತ್ರ

ಆದರೆ ದೇಶೀಯ ಸಮಸ್ಯೆ ಇತರ ಸಮಸ್ಯೆಗಳಿಂದ ಪ್ರತ್ಯೇಕವಾದ ಸಮಸ್ಯೆಯೇನಲ್ಲ. ಅದು ಜನತಾ ಪ್ರಜಾಪ್ರಭುತ್ವ ಹೋರಾಟದ, ಊಳಿಗಮಾನ್ಯ-ವಿರೋಧೀ, ಸಾಮ್ರಾಜ್ಯಶಾಹೀ ವಿರೋಧಿ ಹಾಗೂ ಹಿರಿ ಬೂರ್ಜ್ವಾ ವಿರೋಧೀ ಕ್ರಾಂತಿಯನ್ನು ಪೂರ್ಣಗೊಳಿಸುವ ಹೋರಾಟದ ಅವಿಭಾಜ್ಯ ಅಂಗ. ಅದರ ಪ್ರಗತಿ ಸಾರ್ವತ್ರಿಕ ಪ್ರಜಾಪ್ರಭುತ್ವವಾದೀ ಕ್ರಾಂತಿಕಾರೀ ಹೋರಾಟದ ಪ್ರಗತಿಯನ್ನು ಅವಲಂಬಿಸಿದೆ. ಈ ಹೋರಾಟವನ್ನು ನಡೆಸಬೇಕಾದರೆ ಯಾವುದೇ ದಿಕ್ಕಿನಿಂದ ಬರುವ ಸಂಕುಚಿತವಾದದ ವಿರುದ್ಧ ದೃಢ ನಿಶ್ಚಯದ ಅಚಲವಾದ ನಿಲುವಿನ ಅಗತ್ಯ. ಇದರಲ್ಲಿ ದೇಶದ ಕಾರ್ಮಿಕ ವರ್ಗ ನಿರ್ಣಾಯಕ ಪಾತ್ರ ವಹಿಸಬೇಕಾಗಿದೆ. ಅದು ತನ್ನ ವರ್ಗ ದೃಷ್ಟಿಕೋನವನ್ನು ಹಾಗೂ ವರ್ಗ ಸಂಘಟನೆಗಳನ್ನು ಕಾಯ್ದುಕೊಂಡು, "ದೇಶೀ" ಭಾವನೆಗಳಿಂದ ಅವು ಕಲುಷಿತಗೊಳ್ಳದಂತೆ ನೋಡಿಕೊಂಡು ಎಲ್ಲಾ ದೇಶೀಯ ಗುಂಪುಗಳ ಸಮಾನತೆ ಹಾಗೂ ಭಾರತದ ಐಕ್ಯತೆಯ ಸುಸಂಗತ ಅಚಲ ಹೋರಾಟಗಾರನಾಗಿ ಮುಂದೆ ಬರಬೇಕಾಗಿದೆ. ಈ ಪಾತ್ರವನ್ನು ನಿರ್ವಹಿಸಲು ಅನುಕೂಲವಾದ ಸ್ಥಾನದಲ್ಲಿ ಅದು ನಿಂತಿದೆ. ಪ್ರಜಾಪ್ರಭುತ್ವವಾದೀ ಆಂದೋಲನ ಹಾಗೂ ಶಕ್ತಿಗಳ ಮಿತ್ರತ್ವ ಹಾಗೂ ಸಹಕಾರದೊಂದಿಗೆ ಅದು ರಾಷ್ಟ್ರವನ್ನು ವಿಭಜಿಸಬೇಕೆನ್ನುವ ಸಾಮ್ರಾಜ್ಯಶಾಹೀ ಆಟವನ್ನು ವಿಫಲಗೊಳಿಸುವಲ್ಲಿ ಒಂದು ಮುಖಂಡತ್ವದ ಪಾತ್ರವನ್ನು ವಹಿಸಲು ಸಾಧ್ಯವಿದೆ.

(ಮುಗಿಯಿತು)

ಎಸ್. ಎಫ್. ಐ. – ಡಿ. ವೈ. ಎಫ್. ಐ. ಚಟುವಟಿಕೆಗಳು

ಎಸ್. ಎಫ್. ಐ. ರಾಜ್ಯ ಸಮಿತಿ ಸಭೆ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ರಾಜ್ಯ ಸಮಿತಿ ಸಭೆಯು ಸೆಪ್ಟಂಬರ್ 22, 23 ರಂದು ಮಂಗಳೂರಿನಲ್ಲಿ ಜರುಗಿ ಸಂಘಟನಾ ಬೆಳವಣಿಗೆ ಮತ್ತು ಚಟುವಟಿಕೆಗಳ ಕುರಿತು ವಿಮರ್ಶಿಸಿತು- ಹಾಗೂ ಕಳೆದ ಮೂರು ತಿಂಗಳ ರಾಜಕೀಯ ಬೆಳವಣಿಗೆಗಳ ಕುರಿತು ನಿರ್ಣಯವೊಂದನ್ನು ಅಂಗೀಕರಿಸಿತು.

ನವಂಬರ್ ಅಂತ್ಯದೊಳಗೆ 50 ಸಹಸ್ರ ಸದಸ್ಯತ್ವದ ಗುರಿ ತಲುಪಲು ಹಾಗೂ ಶಾಖೆ, ಜಿಲ್ಲಾ ಸಮ್ಮೇಳನಗಳನ್ನು ನಡೆಸಲು ನಿರ್ಧರಿಸಲಾಗಿದೆ. ರಾಜ್ಯ ಮಟ್ಟದ ಶಿಕ್ಷಣ ಸಮಾವೇಶವೊಂದನ್ನು ನಡೆಸಲು ಸಹ ತೀರ್ಮಾನಿಸಲಾಗಿದೆ. ಹಾಸ್ಟೆಲ್ ವಿದ್ಯಾರ್ಥಿಗಳ ಸಮಸ್ಯೆಗಳ ಪರಿಹಾರಕ್ಕೆ ರಾಜ್ಯ ವ್ಯಾಪಿ ಚಳುವಳಿ ಹೂಡಲಾಗುವುದು. ಪ್ರಜಾಪ್ರಭುತ್ವ ಸಂರಕ್ಷಣೆಗಾಗಿ ಇತರೆ ವಿದ್ಯಾರ್ಥಿ-ಯುವಜನ ಸಂಘಟನೆಗಳೊಂದಿಗೆ ಐಕ್ಯ ಕಾರ್ಯಾಚರಣೆಗೆ ಸಿದ್ಧತೆ ನಡೆಸಲಾಗುವುದು. ಎಸ್.ಎಫ್.ಐ. ಸಂಘಟನೆಯ ಚಟುವಟಿಕೆಗಳಿಗಾಗಿ ಮೂವತ್ತು ಸಹಸ್ರ ರೂ ನಿಧಿ ಸಂಗ್ರಹಿಸಲು ಕರೆ ನೀಡಲಾಗಿದ್ದು ರೈತ, ಕಾರ್ಮಿಕ ಸಂಘಟನೆಗಳಿಗೆ ಸಹಕಾರ ನೀಡಲು ವಿನಂತಿಸಲಾಗಿದೆ. ರಿಜಿಸ್ಟ್ರೇಷನ್ ವಿಳಂಬವಾಗಿರುವುದರಿಂದ, ಅಕ್ಟೋಬರ್ ಮೊದಲ ವಾರದಲ್ಲಿ "ವಿದ್ಯಾರ್ಥಿ ವಾಣಿ" ಪತ್ರಿಕೆಯ 3ನೇ ಮಾದರಿ ಸಂಚಿಕೆ ಬಿಡುಗಡೆ ಮಾಡಲಾಗುವುದು. ಬಡ ವಿದ್ಯಾರ್ಥಿಗಳಿಗೆ ಉಚಿತ ಟ್ಯೂಶನ್ ಏರ್ಪಡಿಸಲು ಎಸ್.ಎಫ್.ಐ. ನ ಎಲ್ಲಾ ಶಾಖೆಗಳಿಗೆ ಕರೆ ನೀಡಲಾಗಿದೆ.

ಗುಲ್ಬರ್ಗ, ಮಂಗಳೂರು ವಿಶ್ವವಿದ್ಯಾಲಯಗಳಿಗೆ ಯು.ಜಿ.ಸಿ. ಮಾನ್ಯತೆಗೆ ಒತ್ತಾಯಿಸಿ, 7 ನೇ ತರಗತಿ ಮತ್ತು ಪ್ರಥಮ ಪಿ.ಯು.ಸಿ. ಗೆ ಪಬ್ಲಿಕ್ ಪರೀಕ್ಷೆ ನಡೆಸಲು ಒತ್ತಾಯಿಸಿ ಬಳ್ಳಾರಿ ಜಿಲ್ಲೆಯ ಎಸ್.ಎಫ್.ಐ.– ಡಿ.ವೈ.ಎಫ್.ಐ.ಕಾರ್ಯಕರ್ತರ ಮೇಲೆ ಹೂಡಲಾಗಿರುವ ಸುಳ್ಳು ಪೋಲೀಸ್ ಮೊಕದ್ದಮೆಗಳನ್ನು ರದ್ದು ಮಾಡಲು ಒತ್ತಾಯಿಸಿ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಮೈಸೂರಿನಲ್ಲಿನ ವಿದ್ಯಾರ್ಥಿಗಳು ಮತ್ತು ಸಾರಿಗೆ ಸಿಬ್ಬಂದಿ ನಡುವಿನ ಘರ್ಷಣೆಗೆ ವಿಷಾದಿಸಿ, ಉಡುಪಿಯಲ್ಲಿ ಸಾಹಿತಿ ಪೋಲಂಕಿ ರಾಮಮೂರ್ತಿಯವರ ಮೇಲೆ ಪ್ರತಿಗಾಮಿ ಶಕ್ತಿಗಳು ನಡೆಸಿದ ಗಲಭೆಯನ್ನು ಖಂಡಿಸಿ, ಅಂಗನವಾಡಿ ಶಿಕ್ಷಕಿಯರಿಗೆ ವೇತನ ಹೆಚ್ಚಳ ಮತ್ತು ಸೂಕ್ತ ರಕ್ಷಣೆಗೆ ಒತ್ತಾಯಿಸಿ ನಿರ್ಣಯಗಳನ್ನು ಅಂಗೀಕರಿಸಿದೆ. ಸರ್ಕಾರಿ ನೌಕರರ ನಿವೃತ್ತಿ ವಯೋಮಿತಿಯನ್ನು 58 ವರ್ಷಗಳಿಗೆ ಏರಿಸಿದ ಜನತಾ ಸರಕಾರದ ಕ್ರಮವನ್ನು ಸ್ವಾಗತಿಸಿ, ಕರ್ನಾಟಕ ಶಿಕ್ಷಣ ಮಸೂದೆ (1983) ಗೆ ಶೀಘ್ರ ಅಂಕಿತ ನೀಡುವಂತೆರಾಷ್ಟ್ರ ಪತಿಯವರನ್ನು ಒತ್ತಾಯಿಸಿ ಹಾಗೂ ಪಠ್ಯ ಪುಸ್ತಕಗಳ ಕೊರತೆ ನೀಗಿಸಲು ರಾಜ್ಯ ಸರ್ಕಾರವನ್ನು ಎಸ್. ಎಫ್.ಐ. ರಾಜ್ಯ ಸಮಿತಿಯು ಒತ್ತಾಯಿಸಿದೆ.

ಒರಿಸ್ಸಾದಲ್ಲಿ ಪೋಲೀಸರು ಮತ್ತು ವರ್ತಕ ವರ್ಗದ ಕೆಲವು ದುಷ್ಟ ಶಕ್ತಿಗಳು ವಿದ್ಯಾರ್ಥಿಗಳ ಮೇಲೆ ನಡೆಸಿರುವ ದೌರ್ಜನ್ಯವನ್ನು ಹಾಗೂ ನಾಗಪುರದಲ್ಲಿ ಎನ್. ಎಸ್. ಯು. ಐ. ರಾಷ್ಟ್ರ ಸಮಾವೇಶದ ಪ್ರತಿನಿಧಿಗಳ ಅಸಭ್ಯ ವರ್ತನೆಯನ್ನು ಎಸ್. ಎಫ್. ಐ. ರಾಜ್ಯ ಸಮಿತಿಯು ಖಂಡಿಸಿದೆ.

ಸಿಂಧನೂರು

"ಸರ್ವರಿಗೂ ಶಿಕ್ಷಣ; ಸರ್ವರಿಗೂ ಉದ್ಯೋಗ" ಚಳುವಳಿಯ ಅಂಗವಾಗಿ ಸಿಂಧನೂರಿನಲ್ಲಿ 18-9-84ರಂದು ಆರಂಭಿಸಲಾಯಿತು. ನ ಗ ರ ದ ಎಲ್ಲಾ ಶಾಲಾಕಾಲೇಜುಗಳ ಮತ್ತು ಹಾಸ್ಟೇಲ್‌ಗಳ ಸಮಸ್ಯೆಗಳನ್ನು ಕ್ರೋಢೀಕರಿಸಿ ಮೆರವಣಿಗೆಯ ಮೂಲಕ ತಹಶೀಲ್ದಾರಿಗೆ ಬೇಡಿಕೆಗಳನ್ನು ಅರ್ಪಿಸಿ ಈಡೇರಿಸುವಂತೆ ಒತ್ತಾಯಿಸಲಾಯಿತು. ಸುಮಾರು 500 ಹೆಚ್ಚು ಎಸ್. ಎಫ್. ಐ. ವಿದ್ಯಾರ್ಥಿಗಳೂ ಈ ದಿನಾಚರಣೆಯಲ್ಲಿ ಪಾಲ್ಗೊಂಡು, ಅಂದು ಒಂದು ದಿನದ "ಧರಣಿ ಸತ್ಯಾಗ್ರಹ"ವನ್ನು ನಡೆಸಿದರು.

ದಿ|| 15-9-84 ರಂದು ಸಿಂಧನೂರಿನ ಸರಕಾರಿ ಕಿರಿಯ ಮಹಾ ವಿದ್ಯಾಲಯದಲ್ಲಿ ನಡೆದ ಚುನಾವಣೆಯಲ್ಲಿ ಎಸ್ ಎಫ್. ಐ. ನೇತೃತ್ವದ ಅಭ್ಯರ್ಥಿಗಳು ಜಯಗಳಿಸಿದರು. ಪ್ರ. ಕಾರ್ಯದರ್ಶಿಯಾಗಿ ರುದ್ರಪ್ಪ (ದ್ವಿತೀಯ ವರ್ಷ ಸೀರಿಕಲ್ಚರ್) ಮತ್ತು ಕ್ರೀಡಾ ಕಾರ್ಯದರ್ಶಿಯಾಗಿ ಕನಕಪ್ಪ (ದ್ವಿತೀಯ ವರ್ಷ ಕಲಾ ವಿಭಾಗ) ಇವರು ಪ್ರತಿಸ್ಪರ್ಧಿ ಎ. ಬಿ. ವಿ. ಪಿ. ಯ ಅಭ್ಯರ್ಥಿಗಳನ್ನು ಪರಾಭವಗೊಳಿಸಿದರು.

ಚಿಕ್ಕಮಗಳೂರು

18-9-1984 ರಂದು ಚಿಕ್ಕಮಗಳೂ ರಿ ನ ಲ್ಲಿ ಎಸ್. ಎಫ್. ಐ.ನ ಮುಖ್ಯ ಕಾರ್ಯಕರ್ತರ ಸಭೆ ಸೇರಿ ಜಿಲ್ಲೆಯಲ್ಲಿರುವ ಶೈಕ್ಷಣಿಕ ವಾತಾವರಣದ ಬಗ್ಗೆ ಚರ್ಚಿಸಲಾಯಿತು.

ಸ್ಥಳೀಯ ಎ. ಐ. ಟಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಎಸ್. ಎಫ್. ಐ. ಸಂಘಟನೆ ಬಲಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಆ ಕಾಲೇಜಿನ ಹಾಸ್ಟೇಲಿನಲ್ಲಿರುವ ಅವ್ಯವಸ್ಥೆಗಳ ವಿರುದ್ಧ ಹೋರಾಟ ನಡೆಸುವ ಅನಿವಾರ್ಯತೆ ಬಗ್ಗೆ ಚರ್ಚಿಸಲಾಯಿತು.

ಮೂಡಿಗೆರೆ

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಟೌನಿನಲ್ಲಿ ಎಸ್. ಎಫ್. ಐ. ಸಂಘಟನಾ ಸಮಿತಿ ರಚಿಸಲಾಗಿದ್ದು ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪಿ. ಸುಬ್ರಮ್ಮಣ್ಯರವರನ್ನು ಸಂಚಾಲಕರಾಗಿ ಆಯ್ಕೆ ಮಾಡಲಾಗಿದೆ.

ಹಾಸನ

17-9-1984 ರಂದು ಹಾಸನದಲ್ಲಿ ಡಿ.ವೈ.ಎಫ್.ಐ.ಮತ್ತು ಡಿ.ವೈ.ಎಫ್. ಐ. ಜಂಟೀ ಸಭೆ ನಡೆಸಲಾಯಿತು. ಹಾಸನದಲ್ಲಿ ಎರಡೂ ಸಂಘಟನೆಗಳ ಬೆಳವಣಿಗೆ ಹಾಗು ಮುಂದಿನ ಕಾರ್ಯಕ್ರಮಗಳ ಬಗ್ಗೆ ವಿಮರ್ಶಿಸಲಾಯಿತು.

ರಾಜ್ಯ ಎಸ್.ಎಫ್.ಐ. ಅಧ್ಯಕ್ಷರಾದ ಆರ್. ಜಯಕುಮಾರ್ ಮತ್ತು ಡಿ.ವೈ.ಎಫ್.ಐ. ರಾಜ್ಯ ಕಾರ್ಯದರ್ಶಿ ಎಸ್. ಶಿವರಾಂ ಸಭೆಯಲ್ಲಿ ಉಪಸ್ಥಿತರಿದ್ದು ಸಂಘಟನೆ ಕಟ್ಟಿ ಬೆಳೆಸುವ ಬಗ್ಗೆ ಮಾರ್ಗದರ್ಶನ ಮಾಡಿದರು. ಸೆಪ್ಟಂಬರ್ 15 ರ ಕಾರ್ಯಕ್ರಮವನ್ನು ಎರಡೂ ಸಂಘಟನೆಗಳು ಇದೇ ಮೊದಲ ಬಾರಿಗೆ ಯಶಸ್ವಿಗೊಳಿಸಿರುವುದನ್ನು ಸಭೆಯಲ್ಲಿ ಗುರುತಿಸಲಾಯಿತು. ಎರಡೂ ಸಂಘಟನೆಗಳ ಸದಸ್ಯತ್ವ ಚಳುವಳಿ ಬಿರುಸಾಗಿ ನಡೆಯುತ್ತಿದೆ.

ಮೂಡಬಿದರೆ

ಭಾರತ ವಿದ್ಯಾರ್ಥಿ ಫೆಡರೇಶನಿನ ತಾಲೂಕು ಮಟ್ಟದ ಶಿಕ್ಷಣ ತರಗತಿಯು ತಾ|| 9-9-84 ರಂದು ಮೂಡಬಿದರೆಯಲ್ಲಿ ಜರುಗಿತು.

ಅಂದು ಬೆಳಿಗ್ಗೆ "ಭಾರತ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟ" ಎಂಬ ವಿಷಯದ ಬಗ್ಗೆ ಬಿ. ಮಾಧವ ಭಾಷಣ ಮಾಡಿದರು.

ಮಧ್ಯಾಹ್ನದ ನಂತರ ಸುರತ್ಕಲ್ ಇಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕರಾದ ರಾಜೇಂದ್ರ ಉಡುಪರವರು "ಭಾರತದ ಇಂದಿನ ಶಿಕ್ಷಣ ಪದ್ಧತಿ" ಎಂಬ ವಿಷಯದ ಬಗ್ಗೆ ಮಾತನಾಡಿದರು.

ಆ ನಂತರ ಕಾರ್ಕಳ ತಾಲೂಕು ಮಟ್ಟದ ಎಸ್.ಎಫ್.ಐ. ಸಮಿತಿಯನ್ನು ಸರ್ವಾನುಮತದಿಂದ ಆರಿಸಲಾಯಿತು. ಅಧ್ಯಕ್ಷ : ರವಿಪ್ರಕಾಶ್ ಎಸ್, ಉಪಾಧ್ಯಕ್ಷ : ಮಹಮ್ಮದ್ ಹನೀಫ್ ಮತ್ತು ಅರವಿಂದ, ಕಾರ್ಯದರ್ಶಿ : ಅಬ್ದುಲ್ ಖಾದರ್ ಕೆ. ಯಂ. ಜೊತೆ ಕಾರ್ಯದರ್ಶಿ : ಹರೀಶ ಮತ್ತು ತಿಮ್ಮಪ್ಪ ಕೆ. ಮತ್ತು 8 ಮಂದಿ ಸಮಿತಿ ಸದಸ್ಯರು.

ಸಭೆಯಲ್ಲಿ ಎಸ್.ಎಫ್.ಐ. ಜಿಲ್ಲಾ ಸಮಿತಿ ಕಾರ್ಯದರ್ಶಿ ಸುನಿಲ್ ನಟೀಕರ್ ಉಪಸ್ಥಿತರಿದ್ದರು.

ಸಭೆಯ ಪ್ರಾರಂಭದಲ್ಲಿ ರವಿಪ್ರಕಾಶ್ ಎಸ್. ಸ್ವಾಗತಿಸಿದರು. ಕೊನೆಯಲ್ಲಿ ಮಹಮ್ಮದ್ ಹನೀಫ್ ವಂದಿಸಿದರು.

ದೊಡ್ಡಬಳ್ಳಾಪುರ

1984 ಸೆ. 16 ರಂದು ದೊಡ್ಡಬಳ್ಳಾಪುರದ ಮಹಿಳಾ ಸಮಾಜದಲ್ಲಿ "ಎಲ್ಲರಿಗೂ ಶಿ ಕ್ಷ ಣ - ಎಲ್ಲರಿಗೂ ಉದ್ಯೋಗ" ಎಂಬ ವಿಷಯದ ಮೇಲೆ ವಿಚಾರ ಸಂಕಿರಣವೊಂದು ನಡೆಯಿತು.

ಡಿ.ವೈ.ಎಫ್.ಐ. ಖಜಾಂಚಿ ಜಯಶೇಖರ್ ಅವರು ಸ್ವಾಗತಿಸಿದರು. ಕೊಂಗಾಡಿಯಪ್ಪ ಕಾಲೇಜಿನ ಶ್ರೀ ರೆಡ್ಡಿ ಅವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅಥಿತಿಗಳಾಗಿ ಮಾತನಾಡಿದ ಡಿ.ವೈ.ಎಫ್.ಐ. ರಾಜ್ಯ ಕಾರ್ಯದರ್ಶಿ ಶ್ರೀ ಎಸ್. ಶಿವರಾಂ ಹಾಗೂ ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಶ್ರೀ ಎಸ್. ಆರ್. ಆರಾಧ್ಯ ಅವರುಗಳು ಮಾತನಾಡುತ್ತ ಎಲ್ಲರಿಗೂ ಶಿಕ್ಷಣ–ಎಲ್ಲರಿಗೂ ಉದ್ಯೋಗದ ಘೋಷಣೆಯ ಅರ್ಥವೆಂದರೆ ವಿದ್ಯಾರ್ಥಿ ಯುವಜನರ ದೈನಂದಿನ ಸಮಸ್ಯೆಗಳಾದ ನಿರುದ್ಯೋಗ, ಉದ್ಯೋಗಾರ್ಥಿಗಳಿಗೆ ತಗಲುವ ಪ್ರಯಾಣ ಭತ್ಯೆ ಮತ್ತು ಇನ್ನಿತರ ಅರ್ಜಿ ಫಾರಂಗಳ ಖರ್ಚು ವೆಚ್ಚಗಳನ್ನು ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳೇ ಭರಿಸಬೇಕೆಂತಲೂ, ವೃತ್ತಿಪರ ಶಿಕ್ಷಣಕ್ಕಾಗಿ, ವಿಜಯನಗರ ಉಕ್ಕಿನ ಕಾರ್ಖಾನೆಗಾಗಿ, ಜಿಲ್ಲಾ ತಾಲ್ಲೂಕ್ ಕೇಂದ್ರಗಳಲ್ಲಿ ವೃತ್ತಿ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸುವುದು, ನೈಸರ್ಗಿಕ ಸಂಪತ್ತನ್ನು ಉಪಯೋಗಿಸಿ ಕೈಗಾರಿಕೆ-ಕಾರ್ಖಾನೆಗಳನ್ನು ಸ್ಥಾಪಿಸಲು ಒತ್ತಾಯಿಸುವುದು, ಹಾಗೂ ಎಲ್ಲಾ ವೃತ್ತಿ ತರಬೇತಿದಾರರಿಗೆ ಉದ್ಯೋಗದ ಭರವಸೆ, ಪ್ರಗತಿ ಪರ ಭೂ ಹಂಚಿಕೆಗಾಗಿ ಮುಂತಾಗಿ ಒತ್ತಾಯಿಸುವುದೇ ಘೋಷಣೆಯನ್ನು ಜಾರಿ ಮಾಡಿದಂತೆ ಎಂದು ಹೇಳಿದರು.

ನಂತರ ದೊ ಡ್ಡ ಬ ಳ್ಳಾ ಪುರ ತಾಲ್ಲೂಕ್ ಸಮಿತಿಯ ಡಿ.ವೈ.ಎಫ್. ಐ. ಸದಸ್ಯರಾದ ಶ್ರೀ ರೇಣುಕಾ ಆರಾಧ್ಯ ಅವರು ವಂದನಾರ್ಪಣೆ ಮಾಡಿದರು.

ಶ್ರದ್ಧಾಂಜಲಿ

ಜಪ್ಪಿನಮೊಗ್ರು ಗ್ರಾಮದ ಕಂಬ್ಳಿಸ್ಥಾನ ಎಂಬಲ್ಲಿಯ ನಿವಾಸಿ ಶೇಖರ ಶೆಟ್ಟಿ ಎಂಬವರು ತಾರೀಕು 8-9-84 ರಂದು ಅಲ್ಪ ಕಾಲದ ಅನಾರೋಗ್ಯದಿಂದ ನಿಧನರಾಗಿರುತ್ತಾರೆ.

ಶ್ರೀಯುತರು ಸಿ.ಪಿ.ಐ. (ಎಂ) ಪಕ್ಷದ ಹಿತೈಷಿಗಳಾಗಿದ್ದರು. ಇವರ ನಿಧನದ ಬಗ್ಗೆ ಜಪ್ಪಿನಮೊಗ್ರು ಪಾರ್ಟಿ ಶಾಖೆಯು ತನ್ನ ಸಂತಾಪ ವ್ಯಕ್ತಪಡಿಸಿದೆ. ಅಲ್ಲದೆ ಸ್ಥಳೀಯ ಮಂಗಳೂರು ಮಹಾನಗರ ಪಾಲಿಕೆಯ ಸದಸ್ಯರು ತಮ್ಮ ದುಃಖ ವ್ಯಕ್ತಪಡಿಸಿರುತ್ತಾರೆ.

ವಾರ್ಷಿಕ ಮಹಾ ಸಭೆ

ಕುಪ್ಪೆ ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ 3ನೇ ವಾರ್ಷಿಕ ಮಹಾ ಸ ಭೆ ಯು ತಾ|| 22-9-84 ರಂದು ಕಾಡೆಸ್ಯಾರ್ ಬಿಲ್ಡಿಂಗ್‌ನಲ್ಲಿ ನಡೆಯಿತು. ದ. ಕ. ಜಿಲ್ಲಾ ಬೀಡಿ ಫೆಡರೇಶನಿನ ಕಾರ್ಯದರ್ಶಿ ಕಾ|| ಯು. ಬಿ. ಲೋಕಯ್ಯನವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಗುರುಪುರ ಸುರತ್ಕಲ್ ಪ್ರದೇಶ ಬೀಡಿ ಲೇಬರ್ ಯೂನಿಯನಿನ ಕಾರ್ಯದರ್ಶಿ ಕಾ|| ಹೊಳ್ಳಯನವರು ತಮ್ಮ ಸಂಘಟನೆಯ ಪರವಾಗಿ ಮಹಾ ಸಭೆಗೆ ಶುಭ ಕೋರಿ ಮಾತಾನಾಡಿದರು. ಕುಪ್ಪೆ ಪದವು ಪ್ರದೇಶದ ರೈತ ಕೃಷಿ ಕೂಲಿಗಾರರ ಸಂಘದ ಕಾರ್ಯದರ್ಶಿ ಕಾ|| ನೀಲಯ ನಾಯ್ಕನವರು ಸಭೆಗೆ ಶುಭ ಕೋರಿ ಮಾತಾನಾಡಿದರು. ಸಭೆಯ ಅಧ್ಯಕ್ಷತೆಯನ್ನು ಕಾ|| ಆನಂದ ಪೂಜಾರಿಯವರು ವಹಿಸಿದ್ದರು ಕಾ|| ವಾಸುದೇವ ಆಚಾರ್ಯರವರು ಸ್ವಾಗತಿಸಿದರು. ಮತ್ತು 1983 ರ ವರದಿಯನ್ನು ಕಾ|| ವಾಸುದೇವ ಆಚಾರ್ಯರವರು ಮತ್ತು ಲೆಕ್ಕ ಪತ್ರವನ್ನೂ ಕಾ|| ಬಾಲಕೃಷ್ಣ ಶಟ್ಟಿಯವರು ಸಭೆಯ ಮುಂದಿಟ್ಟರು.

ಸಾರಿಗೆ ಸಂಸ್ಥೆಯ ಅನುಚಿತ ವರ್ತನೆ

ವೀರಾಜಪೇಟೆ ನಗರದ ಐದನೇ ಬ್ಲಾಕ್‌ನಲ್ಲಿ ಖಾಸಗಿ ವ್ಯಕ್ತಿಗೆ ಸೇರಿದ ಖಾಲಿ ಜಾಗವನ್ನು ರಾಜ್ಯ ರಸ್ತೆಸಾರಿಗೆ ಸಂಸ್ಥೆಯು ಬಸ್ ನಿಲ್ದಾಣವನ್ನು ಕಟ್ಟುವ ಉದ್ದೇಶಕ್ಕಾಗಿ ಬಹಳ ಹಿಂದೆಯೇ ಸ್ವಾಧೀನ ಪಡೆದುಕೊಳ್ಳಲಾಗಿತು. ಜಮಾಬಂಧಿ ಕೂಡ ಸಂಸ್ಥೆಯ ಹೆಸರಿಗೆ ವರ್ಗಾವಣೆಯಾಯಿತು.

ಜನತಾ ಸರ್ಕಾರ ಆಳ್ವಿಕೆಗೆ ಬಂದ ನಂತರ ಕಾರ್ಯಗಳು ಚುರುಕಾಗಿ ನಡೆಯಬಹುದೆಂದು ಜನತೆ ನಿರೀಕ್ಷಿಸಿದ್ದರು.

ಆದರೆ ಜನತೆಯ ನಿರೀಕ್ಷೆ ಸುಳ್ಳಾಗುತ್ತಿದೆ ? ಸ್ವಾಧೀನ ಪಡೆದುಕೊಂಡ ಜಾಗವು ಜವುಗು ಪ್ರದೇಶ ಎಂಬ ಕುಂಟು ನೆಪಗಳನ್ನೊಡ್ಡಿ ಸಾರಿಗೆ ಸಂಸ್ಥೆ ವಾಪಾಸು ಖಾಸಗಿ ವ್ಯಕ್ತಿಗೆ ಸ್ವಾಧೀನ ಕೊಡುವ ಸನ್ನಾಹಗಳು ನಡೆದಿವೆ ಮತ್ತು ಇದು ಕೆಲವು ಪ್ರಭಾವಿ ವ್ಯಕ್ತಿಗಳು ಮತ್ತು ಸಾರಿಗೆ ಸಂಸ್ಥೆಯ ಹಿರಿಯ ಅಧಿಕಾರಿಗಳು ಜನವಿರೋಧಿ ಕ್ರಮದಿಂದ ನಡೆದದ್ದು ಎನ್ನುವ ಸಂಶಯವಿದೆ.

ವೀರಾಜಪೇಟೆ ನಗರಕ್ಕೆ ಅತ್ಯಂತ ಅಗತ್ಯವಿರುವ ಸರ್ಕಾರಿ ಬಸ್ ನಿಲ್ದಾಣವನ್ನ ನಿರ್ಮಿಸುವುದರ ಬದಲು ಜಾಗವನ್ನು ವಾಪಾಸು ಕೊಡುವ ರಾಜ್ಯ ಸಾರಿಗೆ ಸಂಸ್ಥೆಯ ಈ ಜನವಿರೋಧಿ ಕ್ರಮವನ್ನ ವೀರಾಜಪೇಟೆ ನಗರ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಉಗ್ರವಾಗಿ ಖಂಡಿಸಿದೆ. ಅಲ್ಲದೆ ಕೂಡಲೇ ಮಧ್ಯೆ ಪ್ರವೇಶಿಸಿ ಸೂಕ್ತ ನಿರ್ಧಾರವನ್ನು ಕೈಗೊಳ್ಳಲು ಜನತಾ ಸರ್ಕಾರವನ್ನು ಒತ್ತಾಯಿಸಿದೆ.

ರಾಯಚೂರು

ಸ್ಪಿನ್ನಿಂಗ್ ಕಾರ್ಮಿಕರ ಹೋರಾಟ

ಯರಮರಸ್ ಸ್ಪಿನ್ನಿಂಗ್ ಮಿಲ್ ಕಾರ್ಮಿಕರು ಸಿ.ಐ.ಟಿ.ಯು. ನೇತೃತ್ವ ದಲ್ಲಿ ಎರಡು ತಿಂಗಳಿದ ತಮ್ಮ ನ್ಯಾಯ ಯುತ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟದಲ್ಲಿದ್ದಾರೆ.

ಹತ್ತಾರು ಬಾರಿ ಅಸಿಸ್ಟೆಂಟ್ ಲೇಬರ್ ಕಮೀಷನರ್, ಜಿಲ್ಲಾಧಿಕಾರಿ ಗಳ ಸಮಕಮದಲ್ಲಿ ಮಾತುಕತೆಯಾ ದಗ್ಯೂ ಮ್ಯಾನೇಜ್‌ಮೆಂಟನ ಕಾರ್ಮಿಕ ವಿರೋಧಿ ನೀತಿಯಿಂದಾಗಿ ಮಾತುಕತೆ ಸಫಲವಾಗದೆ, ಕಾರ್ಮಿಕರು 9-9-84 ರಂದು ವಿಧಾನಸೌಧ ಚಲೋ ಕಾರ್ಯಕ್ರಮವನ್ನು ಹಾಕಿ 500 ಜನ ಕಾರ್ಮಿಕರು 10-9-84 ರಿಂದ 15-9-84 ರವರೆಗೆ ವಿಧಾನಸೌಧದ ಮುಂದೆ ಧರಣಿಯನ್ನು ಮಾಡಿ ಸಹಕಾರ ಮಂತ್ರಿ ಆರ್. ಜಾಲಪ್ಪ ಮತ್ತು ಕಾರ್ಮಿಕ ಮಂತ್ರಿ ಎಂ. ಪಿ. ಪ್ರಕಾಶ್ ಇವರಿಗೆ ಮನವಿಯನ್ನರ್ಪಿಸಿ, ಚರ್ಚಿಸಿದಾಗ್ಯೂ ಸಹಕಾರ ಮಂತ್ರಿ ಆರ್. ಜಾಲಪ್ಪ ನವರ ಕಾರ್ಮಿಕ ವಿರೋಧಿ ನೀತಿಯಿಂದಾಗಿ ಸಮಸ್ಯೆಗಳು ಬಗೆಹರಿಯಲಿಲ್ಲ. ಫ್ಯಾಕ್ಟರಿಯನ್ನು ಲಾಕ್‌ಔಟ್ ಮಾಡುವುದಾಗಿ ಬೆದರಿಸಿದ ಮಂತ್ರಿಗಳು, ಕಾಂಗ್ರೆ ಮಂತ್ರಿಗಳಂತೆ ವರ್ತಿಸಿದ್ದನ್ನು ಕಾರ್ಮಿಕರು ಉಗ್ರವಾಗಿ ಖಂಡಿಸಿದ್ದಾರೆ.

ಮ್ಯಾನೇಜ್‌ಮೆಂಟಿನ ಮತ್ತು ಪೋಲೀಸರ ದಬ್ಬಾಳಿಕೆಯ ವಿರುದ್ಧ ಕಾರ್ಮಿಕರು ನ್ಯಾಯಯುತ ಹೋರಾಟವನ್ನು ಎರಡು ತಿಂಗಳಿಂದಲೂ ಮುಂದುವರಿಸುತ್ತಿದ್ದಾರೆ. ಕಾರ್ಮಿಕರು ಮುಂದೆ ಹಾಕಿಕೊಳ್ಳಲಿರುವ ರಾಯಚೂರ್ ಬಂದ್, ಕೈಗಾರಿಕಾ ವಲಯ ಬಂದ್, ರಸ್ತಾರೋಕೊ ರೈಲ್ ರೋಕೋ ಕಾರ್ಯಕ್ರಮಗಳಿಗೆ ಸಾರ್ವಜನಿಕರು ಬೆಂಬಲಿಸಬೇಕೆಂದು ಸಂಘದ ಅಧ್ಯಕ್ಷರಾದ ಕೆ. ಪುರುಷೋತ್ತಮ ವಿನಂತಿಸಿದ್ದಾರೆ.

ಪುತ್ತೂರು ರೈತ ಸಂಘದ ಸಭೆ

ತಾ|| 24-9-1984 ರಂದು, ಪುತ್ತೂರು ತಾಲೂಕುರೈತ ಸಂಘದ ಸಭೆಯು ಕಾ|| ಬಿ. ಚೋಮ ನವರ ಅಧ್ಯಕ್ಷತೆಯಲ್ಲಿ ಸೇರಿತು. ಮುಖ್ಯ ಅಥಿತಿಗಳಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯ ಸದಸ್ಯರಾದ ಕಾ|| ಎಂ.ಕೆ. ಭಟ್‌ರವರು ಉಪಸ್ಥಿತರಿದ್ದರು.

ಆರಂಭದಲ್ಲಿ ಪುತ್ತೂರು ತಾಲೂಕು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾ|| ಬಿ. ರಾಮಕೃಷ್ಣರವರು ಸ್ವಾಗತಿಸಿದರು.

ಪುಸ್ತೂರು ತಾಲೂಕಿನಲ್ಲಿ ಸಂಘಟಿತ ಹಾಗೂ ಸ್ಪಷ್ಟವಾದ ಸೈದ್ಧಾಂತಿಕ ಹಿನ್ನೆಲೆಯಿಂದ ರೈತ ಸಂಘವನ್ನು ಸಂಘಟಿಸುವ ನಿಟ್ಟನಲ್ಲಿ ತಾ|| 17-10-1984 ರಿಂದ 4-11-1984ರ ತನಕ ಕಾರ್ಯಕರ್ತರಿಗೆ ಅಧ್ಯಯನ ಶಿಬಿರವನ್ನು ಜರಗಿಸಲಾಗುವುದೆಂದು ತಿಳಿಸಿದರು. ಈ ಅಧ್ಯಯನ ಶಿಬಿರದಲ್ಲಿ ರಾಜ್ಯ ಮತ್ತು ಜಿಲ್ಲಾ ಮುಖಂಡರುಗಳು ಭಾಗವಹಿಸಲಿರುವರು. 250 ಮಂದಿ ಕಾರ್ಯಕರ್ತರುಶಿಬಿರದಲ್ಲಿ ಪಾಲ್ಗೊಳ್ಳುವನಿರೀಕ್ಷೆ ಇದೆ. ಎಂದು ಕಾ|| ಬಿ. ರಾಮಕೃಷ್ಣ ರವರು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಕಾ|| ಎಂ.ಕೆ. ಭಟ್ ಅವರು ಪುತ್ತೂರು ತಾಲೂಕಿನ ವಿವಿಧ ಗ್ರಾಮಗಳಿಂದ ಬಂದಿದ್ದ ಕಾರ್ಯಕರ್ತರಿಗೆ ಅಧ್ಯಯನ ಶಿಬಿರದ ಮಹತ್ವವನ್ನು ವಿವರಿಸಿದರು. ಹಳ್ಳಿಯ ರೈತ ಕೃಷಿ ಕಾರ್ಮಿಕರು ರಾಜಕೀಯ ಜಾಗೃತಿ ಪಡೆದುಕೊಳ್ಳಬೇಕು. ಅನ್ಯಾಯ ಶೋಷಣೆಗಳಿಲ್ಲದ ಸಮ ಸಮಾಜದ ಸ್ಥಾಪನೆಯಾಗಬೇಕಾದರೆ ಹಳ್ಳಿಯ ಜನರೇ ರಾಜಕೀಯ ಮುಂದಾಳುತ್ವವಹಿಸಬೇಕೆಂದು ಕರೆಯಿತ್ತರು.

ಕೆಪಿಸಿಸಿ (ಐ) ವಿರುದ್ಧ ಕೆಎಸ್‌ಆರ್‌ಟಿಸಿ ಮೊಕದ್ದಮೆ

1982 ರ ಜನವರಿಯಲ್ಲಿ ನಡೆದ ಚಿಕ್ಕಮಗಳೂರು ಲೋಕ ಸಭಾ ಕ್ಷೇತ್ರದ ಉಪಚುನಾವಣೆಯ ಸಂದರ್ಭದಲ್ಲಿ ಶ್ರೀಮತಿ ಇಂದಿರಾ ಗಾಂಧಿ ಯವರ ಚುನಾವಣಾ ಪ್ರಚಾರ ಸಭೆಗಳಿಗೆ ಜನರನ್ನು ಕೊಂಡೊಯ್ಯಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳನ್ನು 25 ಸಾವಿರ ರೂ. ಮುಂಗಡ ಹಣ ತೆತ್ತು ಬಾಡಿಗೆಗೆ ಪಡೆಯಲಾಗಿತ್ತು. ಈ ಬಾಬ್ತು ಬಾಕಿ 75 ಸಾವಿರ ರೂಗಳನ್ನು ಹಲವಾರು ಬಾರಿ ಸೂಚನೆ ಕಳುಹಿಸಿದರೂ ಇದುವರೆಗೂ ಪಾವತಿ ಮಾಡದಿರುವುದರಿಂದ ಕೆ. ಎಸ್. ಆರ್. ಟಿ. ಸಿ. ಹಾಸನ ವಿಭಾಗವು ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ (ಐ) ಯ ಮೇಲೆ ಇದೀಗ ಮೊಕದ್ದಮೆ ಹೂಡಿದೆ.

ಅಧಿಕಾರಿಯ ಸಸ್ಪೆಂಡ್ ವಿರುದ್ಧ ಪ್ರತಿಭಟನೆ

ಇತ್ತೀಚೆಗೆ ದಾಂಡೇಲಿ ಪುರಸಭೆಯ ಮುಖ್ಯಾಧಿಕಾರಿಗಳಾದ ಶ್ರೀ ಡಿ.ಹೆಚ್. ಮುಲ್ಲಾ ಅವರ ಸಸ್ಪೆಂಡ್ ಆಜ್ಞೆಯನ್ನು ಹೊರಡಿಸಿದ್ದಾರೆ. ಕಾರಣ ಇವರು ಹತ್ತು ಬಡ ಕುಟುಂಬಕ್ಕೆ ಮನೆಯ ನಿವೇಶನ ನೀಡಿ ಮತ್ತು ಪುರಸಭೆಯ ಜೀಪನ್ನು ದುರುಪಯೋಗ ಮಾಡಿದ್ದರೆಂದು ಈ ಅಪಾದನೆಯಲ್ಲಿ ಹೊರಿಸಿದ್ದಾರೆ.

ಈ ಹಿಂದೆ ಬಾಂಬೇ ಚಾಳಿನಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಇಟ್ಟ ಜಾಗದಲ್ಲಿ 12 ಜನರಿಗೆ ನಿವೇಶನ ಕಟ್ಟಕೊಳ್ಳಲು ಹಿಂದಿನ ಕೌನ್ಸಿಲ್ ಇದ್ದಾಗ ಡಿ. ಸಿ. ಯವರೇ 5 ವರ್ಷದ ಲೀಜ್ ಮೇಲೆ ಜಾಗವನ್ನು ಒದಗಿಸಲಾಗಿತ್ತು. ಇದೇ ಸ್ಥಳದಲ್ಲಿ ಈಗಿನ ಕೌನ್ಸಿಲರ್‌ಗಳು ಹತ್ತು ಜನ ಬಡ ಕುಟುಂಬಕ್ಕೆ ನಿವೇಶನವನ್ನು ಒಂದು ವರ್ಷದ ಭೂ ಬಾಡಿಗೆಯ ಕರಾರಿನ ಮೇಲೆ ಕೊಡಲು ಕೌನ್ಸಿಲ್ಲಿನಲ್ಲಿ ಸರ್ವಾನು ಮತದಿಂದಾತೀರ್ಮಾನಿಸಲಾಗಿತ್ತು. ಈ ಠರಾವನ್ನು ಕಾರ್ಯರೂಪಕ್ಕೆ ತರುವುದು ಮುಖ್ಯಾಧಿಕಾರಿಗಳ ಕೆಲಸವಲ್ಲವೇ ? ಈ ವಿಷಯದ ಕುರಿತು ದಾಂಡೇಲಿ ಯಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಹಾಗೂ ವಿರೋಧಿ ಪಕ್ಷದ ಬೆಂಬಲದಿಂದ ದಿನಾಂಕ 24-9-84 ರಂದು ಸಂಡೇ ಮೈದಾನದಲ್ಲೂ 26-9-84 ರಂದು ಹಳೇ ದಾಂಡೇಲಿ, ಹಾಗೂ ಸುಭಾಶ್‌ನಗರದಲ್ಲೂ ಮೆರವಣಿಗೆ ಮತ್ತು ಬಹಿರಂಗ ಸಭೆಯನ್ನು ನಡೆಸಿ, ನಗರ ಯೋಜನಾ ಛೇರ್‌ಮನ್ನರಾದ ಚಬ್ಬಿಯವರನ್ನು ಕಿತ್ತೊಗೆಯಬೇಕೆಂದು, ಸಸ್ಪೆಂಡ್ ಮಾಡಿದ ಮುಖ್ಯಾಧಿಕಾರಿಯವರನ್ನು ಬೇಗ ಸಸ್ಪೆಂಡ್ ರದ್ದು ಮಾಡಿ ವಾಪಸ್ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತಾ ನಗರದ ಮುಖ್ಯ ಬೀದಿಗಳಲ್ಲಿ ಸುತ್ತಾಡಿ ನಂತರ ಸಂಡೇ ಮೈನಾನದಲ್ಲಿ ಬಹಿರಂಗೆ ಸಭೆಯನ್ನು ಏರ್ಪಡಿಸಲಾಯಿತು.

ಈ ಸಭೆಯ ಅಧ್ಯಕ್ಷತೆಯನ್ನು ಪುರಸಭೆಯ ಅಧ್ಯಕ್ಷರಾದ ಹಾಗೂಸಿ.ಪಿ.ಐ. (ಎಂ) ಪಕ್ಷದ ಸದಸ್ಯರೂ ಆದ ಕಾ. ತುಕಾರಾಮ್ ಎಸ್. ನಾಯಕ್‌ರವರು ವಹಿಸಿದ್ದರು. ಕಾ. ಉಮೇಶ್‌ನಾಯ್ಕ ಕಾ. ಹರೀಶ ನಾಯ್ಕ ಜನತಾ ಪಕ್ಷದ ಕೋನಾಪುರ ಅವರು ಮಾತನಾಡಿದರು ಕಾ. ಟಿ. ಟ. ನಾಯ್ಕರವರು ವಂದಿಸಿದರು.

ಭೂ ನ್ಯಾಯ ಮಂಡಳಿಯಿಂದ ರೈತರಿಗೆ ಅನ್ಯಾಯ

ಭೂ ನ್ಯಾಯ ಮಂಡಳಿಯು ರೈತರ ಮತ್ತು ಕೃಷಿ ಕಾರ್ಮಿಕರ ಪರ ತೀರ್ಪು ನೀಡುವ ಬದಲು ಭೂ ಮಾಲಿಕರ ಪರ ತೀರ್ಪು ನೀಡಿ ಹಲವಾರು ವರ್ಷಗಳಿಂದ ಭೂಮಿಯಲ್ಲಿ ನೆಲೆಯಾಗಿದ್ದ ಬಡ ರೈತರು ಮತ್ತು ಕೃಷಿ ಕಾರ್ಮಿಕರು ತಮ್ಮ ಸ್ವಾಧೀನವಿರುವ ಭೂಮಿಯನ್ನು ಕಳೆದುಕೊಳ್ಳುವ ಸಂದರ್ಭ ಒದಗಿ ಬಂದಿರುತ್ತದೆ.

ಭೂ ನ್ಯಾಯ ಮಂಡಳಿಯ ತೀರ್ಪಿನಿಂದ ಭೂಮಿ ಕಳಕೊಂಡು ಅನ್ಯಾಯಕ್ಕೆ ಒಳಗಾಗಿರುವ ಹಲವಾರು ರೈತರು ಮತ್ತು ಕೃಷಿ ಕಾರ್ಮಿಕರು ಸಂಕಷ್ಟಕ್ಕೆ ಒಳಗಾಗಿದ್ದಾರೆ.

ಭೂಮಿಯಲ್ಲಿ ನಿಜವಾಗಿ ಶ್ರಮ ಪಡುವ ರೈತನಿಗೆ ಭೂಮಿ ಕೊಡುವ ಬದಲಾಗಿ, ಭೂ ಮಾಲಕರ ಜತೆ ಶಾಮೀಲಾಗಿ, ಭೂ ಮಾಲಿಕರ ಪರವಾಗಿ ತೀರ್ಪು ನೀಡುವುದಾದರೆ, ಭೂ ನ್ಯಾಯ ಮಂಡಳಿಯ ವಿರುದ್ಧ ಸಂಘಟಿತ ಉಗ್ರ ಹೋರಾಟ ನಡೆಸುವುದು ರೈತ ಸಂಘಕ್ಕೆ ಅನಿವಾರ್ಯವಾಗುತ್ತದೆ. ಎಂದು ಪುತ್ತೂರು ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ಬಿ. ರಾಮಕೃಷ್ಣ ತಿಳಿಸಿದ್ದಾರೆ. ಈಗಾಗಲೇ ತಾಲ್ಲೂಕು ಭೂ ನ್ಯಾಯ ಮಂಡಳಿಯ ಅಧ್ಯಕ್ಷರಿಗೆ ರೈತರಿಗಾಗುತ್ತಿರುವ ಅನ್ಯಾಯವನ್ನು ವಿವರಿಸಿ, ನ್ಯಾಯ ದೊರಕಿಸಿ ಕೊಡಲು ಮನವಿ ಸಲ್ಲಿಸಲಾಗಿದೆ.

ಕಳಸದಲ್ಲಿ ಬಹಿರಂಗ ಸಭೆ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಸಿ. ಐ. ಟಿ. ಯು. ವಿನ ಜಂಟಿ ಸಭೆ ತಾ. 23-9-84 ರಂದು ಕಳಸದಲ್ಲಿ ನಡೆಯಿತು. ಈ ಸಭೆಯಲ್ಲಿ ಸುಮಾರು ಎಂಟು ನೂರಕ್ಕೂ ಹೆಚ್ಚು ರೈತ ಕಾರ್ಮಿಕರು ಕಳಸಾ ಹೋಬಳಿಯ ವಿವಿಧ ಭಾಗಗಳಿಂದ ಮೆರವಣಿಗೆಯಲ್ಲಿ ಬಂದು ಕಳಸದ ಪಂಚಾಯಿತಿ ಕಛೇರಿಯ ಮುಂಭಾಗದಲ್ಲಿ ಭಾರಿ ಬಹಿರಂಗ ಸಭೆಯಲ್ಲಿ ಪಾಲ್ಗೊಂಡರು.

ಈ ಸಭೆಯ ಅಧ್ಯಕ್ಷತೆಯನ್ನು ಹೊರನಾಡು ಶ್ರೀ ವರ್ಮ ಹೆಗ್ಗಡೆಯವರು ವಹಿಸಿದ್ದರು. ಈ ಸಭೆಗೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಿ. ಪಿ. ಐ. (ಎಂ) ನ ರಾಜ್ಯ ಕಾರ್ಯದರ್ಶಿ ಪಿ. ರಾಮಚಂದ್ರರಾವ್ ರವರು ಮಾತನಾಡುತ್ತಾ ಸಾಮ್ರಾಜ್ಯ ಶಾಹಿಗಳ ಯುದ್ಧ ಕೋರ ನೀತಿಯ ಬಗ್ಗೆ ವಿಛಿದ್ರಕಾರಿ ಶಕ್ತಿಗಳ ಜಾತೀಯ ಪ್ರಾಂತೀಯ ಮತ್ತು ಭಾಷೆಯ ಆಧಾರದಲ್ಲಿ ದೇಶದ ಸಮಗ್ರತೆ ಹಾಗೂ ಶಾಂತಿಯನ್ನು ಒಡೆಯುವ ಪ್ರಯತ್ನದ ವಿರುದ್ಧ ಜನತೆಯನ್ನು ಎಚ್ಚರಿಸಿದರು. ಯುದ್ಧದ ಕಾರ್ಮೋಡವನ್ನು ಛಿದ್ರಗೊಳಿಸಲು ಶಾಂತಿಯನ್ನು ಕಾಪಾಡುವಲ್ಲಿ ನಮ್ಮ ಪಕ್ಷಕ್ಕೆ ಬೇರೆಲ್ಲಾ ಪಕ್ಷಗಳಿಗಿಂತ ಗುರುತರವಾದ ಹೊಣೆಗಾರಿಕೆ ಇರುವುದರ ಬಗ್ಗೆ ರೈತ ಹಾಗೂ ಕಾರ್ಮಿಕ ವರ್ಗವನ್ನು ಎಚ್ಚರಿಸಿದರು.

ಕರ್ನಾಟಕಪ್ರಾವೆನ್ಸಿಯಲ್ ಪ್ಲಾನ್‌ಟೇಷನ್ ವರ್ಕರ್ಸ್ ಯೂನಿಯನ್ ಕಾರ್ಯದರ್ಶಿ ಯವರಾದ ಕಾ. ಎ .ಸಿ. ಕೇಶವರವರು ಮತ್ತು ಸಹಕಾರ್ಯದರ್ಶಿ ಜಿ. ಎಸ್. ರಾಘವೇಂದ್ರ ಡಿ. ವೈ, ಎಫ್. ಐ. ನ ಸಂಘಟಕರಾದ ಕಾ. ಎಸ್. ಪಿ. ಪ್ರಕಾಶ್‌ರವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಹಲ್ಲೆ ಖಂಡನೀಯ

ಸವದತ್ತಿಯಲ್ಲಿ ಇತ್ತೀಚೆಗೆ ರಸ್ತೆಯ ಬದಿಯಲ್ಲಿ ಬಡ ಅಂಗಡಿಕಾರರು ಹಾಕಿಕೊಂಡಿದ್ದ ಚಿಕ್ಕ ಪುಟ್ಟ ಅಂಗಡಿಗಳನ್ನು ಕಿತ್ತುಹಾಕಲು ಪುರಸಭೆಯ ಸಿಬ್ಬಂದಿಯವರು ಆರಂಭಿಸಿದಾಗ ಕಾ ನಿತ್ಯಾನಂದರು ಅದನ್ನು ತಡೆಯಲು ಹೋದಾಗ ಪುರಸಭೆಯ ನೌಕರರು ಕಾಮ್ರೇಡ್ ನಿತ್ಯಾನಂದರ ಮೇಲೆ ನಡೆಸಿದ ಹಲ್ಲೆ ಖಂಡನೀಯವಾಗಿದೆ. ಪುರಸಭೆಯ ಕಾಂಗ್ರೆ ಮತ್ತು ಬಿ. ಜೆ. ಪಿ. ಸದಸ್ಯರು ಸೇರಿಕೊಂಡು ಪೋಲೀಸ್ ಅಧಿಕಾರಿಗಳ ಮೇಲೆ ಒತ್ತಾಯ ತಂದು ಕಾಮ್ರೇಡ್ ನಿತ್ಯಾನಂದರ ಮೇಲೆ ಒಂದು ಸುಳ್ಳು ಕೇಸನ್ನು ದಾಖಲು ಮಾಡಿಸಿದರು. ಈ ಘಟನೆಗೆ ಸ್ಥಳೀಯವಾಗಿಯಾಗ ಪ್ರತಿಭಟನೆಯೂಬಾರದಿರು ಶೋಚನೀಯವಾಗಿದೆ ಎಂದು ಕಾ. ನಿತ್ಯಾನಂದ ಜಿಯವರು ತಿಳಿಸಿದ್ದಾರೆ.

Printed & Published by P. Ramachandra Rao by him on behalf of the Communist Party of India (Marxist) Karnataka State Committee, K. V. Temple Street, Sultanpet, Bangalore-560052 Editoral and managerial office, L-56, K. V. Temple Street. Sultanpet. B-53 Phone : 24154

Editor : P. Ramachandra Rao Managing Editor : N. K. Upadhyaya